ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಮೇ 03, 2023

ಸಂಪುಟ : 49 ಸಂಚಿಕೆ : 351 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com







## 30 ಪರ್ಸೆಂಟ್ ಆದರೂ ಜನರ ಬಗ್ಗೆ ಮಾತನಾಡಿ: ರಾಹುಲ್



### ಹರಿಹರದಲ್ಲಿ ಮೋದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತರಾಟೆ

ಹರಿಹರ, ಮೇ 2 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕರ್ನಾಟಕದ ಸಮಾವೇಶಗಳಲ್ಲಿ ಕೇವಲ ತಮ್ಮ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ. ಭಾಷಣಗಳಲ್ಲಿ ಶೇ.30ರಷ್ಟಾದರೂ ರಾಜ್ಯದ ಜನರ, ಮಹಿಳೆಯರ, ಯುವಕರ ಹಾಗೂ ರೈತರ ಬಗ್ಗೆ ಮಾತನಾಡಲಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕುಟುಕಿದ್ದಾರೆ.

ಇಲ್ಲಿನ ಗಾಂಧಿ ಮೈದಾನದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಕಾಂಗ್ರೆಸ್‌ನ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಅವರು ಮಾತನಾಡಿದರು.

ನಾನು ಕಾಂಗ್ರೆಸ್ ನಾಯಕರ ಬಗ್ಗೆ ಪ್ರಸ್ತಾಪಿಸುತ್ತೇನೆ. ಆದರೆ, ಪ್ರಧಾನಿ ಮೋದಿ ತಮ್ಮ ಭಾಷಣಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಬಿಜೆಪಿ ನಾಯಕರನ್ನು ಪ್ರಸ್ತಾಪಿಸುವುದಿಲ್ಲ. ಕೇವಲ ತಮ್ಮ ಬಗ್ಗೆ ಮಾತ್ರ ಮಾತನಾಡಿಕೊಳ್ಳುತ್ತಾರೆ. ಕಾಂಗ್ರೆಸ್ 91 ಬಾರಿ ವಾಗ್ದಾಳಿ ನಡೆಸಿದೆ ಎಂದು ಹೇಳುತ್ತಾರೆ. ಪ್ರಧಾನಿಯವರೇ ಈ ಚುನಾವಣೆ ನಿಮ್ಮ ಬಗ್ಗೆ ಅಲ್ಲ ಎಂದು ರಾಹುಲ್ ಗಾಂಧಿ ಹೇಳಿದರು.

ಪ್ರಧಾನಿ ಮೋದಿಯವರಿಗೆ ತಮ್ಮ ಬಗ್ಗೆ ಹೇಳಿಕೊಳ್ಳುವುದು ಬಹಳ ಇಷ್ಟ. ಎಲ್ಲೇ ಹೋದರೂ ತಮ್ಮ ಬಗ್ಗೆಯೇ ಮಾತನಾಡುತ್ತಾರೆ. ಮುಂದಿನ ದಿನಗಳಲ್ಲಿ ಶೇ.70ರಷ್ಟು ನಿಮ್ಮ ಬಗ್ಗೆಯೇ ಮನಃಪೂರ್ತಿ ಮಾತನಾಡಿಕೊಳ್ಳಿ. ಆದರೆ, ಕನಿಷ್ಠ ಶೇ.30ರಷ್ಟಾದರೂ ಜನತೆಯ ಬಗ್ಗೆ ಮಾತನಾಡಿ. ಯಾವ ತಪ್ಪುಗಳಾಗಿವೆ ಎಂಬುದನ್ನು ತಿಳಿಸಿ ಎಂದು ರಾಹುಲ್ (3ನೇ ಪುಟಕ್ಕೆ)

## ಕಾಂಗ್ರೆಸ್‌ನಿಂದ ಭರವಸೆಗಳ ಮಹಾಪೂರ

### ಮೀಸಲಾತಿ ಶೇ.75ಕ್ಕೆ ಹೆಚ್ಚಳ, ಭಜರಂಗ ದಳ ಹಾಗೂ ಪಿಎಫ್ಐ ನಿಷೇಧ

ಬೆಂಗಳೂರು, ಮೇ 2 - ಗೃಹ ಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಯುವ ನಿಧಿ ಮತ್ತು ಎಲ್ಲಾ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ಭರವಸೆಗಳನ್ನು ಪ್ರಕಟಿಸಿದ್ದ ಕಾಂಗ್ರೆಸ್, ಮತದಾರರನ್ನು ಓಲೈಯಿಸಿಕೊಳ್ಳಲು ಇಂದಿಲ್ಲಿ ಮತ್ತಷ್ಟು ಭರವಸೆಗಳ ಮಹಾಪೂರವನ್ನೇ ಹರಿಸಿದೆ.

'ಸರ್ವ ಜನಾಂಗದ ಶಾಂತಿಯ ತೋಟ- ಇದುವೇ ಕಾಂಗ್ರೆಸ್ ಬದ್ಧತೆ' ಎಂಬ ಹೆಸರಿನಡಿ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿರುವ ಕಾಂಗ್ರೆಸ್ ಪಕ್ಷ, ಅಧಿಕಾರಕ್ಕೆ ಬಂದರೆ ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿರುವ ಭಜರಂಗದಳ, ಪಿಎಫ್ಐ ನಿಷೇಧಿಸುವುದಾಗಿ ಘೋಷಿಸಿದೆ.

ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವು ದಾಗಿ ಬಿಜೆಪಿ ಹೇಳಿದ್ದರೆ, ಸಮಾಜದ ಆರೋಗ್ಯ ಹಾಳು ಮಾಡುವ ಸಂಘಟನೆಗಳನ್ನು ನಿಷೇಧ ಮಾಡುವುದಾಗಿ ಕಾಂಗ್ರೆಸ್ ತಿಳಿಸಿದೆ.

ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ, ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಆಕರ್ಷಿಸಲು ಭರವಸೆಗಳ ಪಟ್ಟಿಯೇ ನೀಡಲಾಗಿದೆ.



### ಹಳೆಯ ಪಿಂಚಣಿ ಯೋಜನೆ ಜಾರಿಗೆ ತರುವುದಾಗಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಣೆ

200 ಯುನಿಟ್ ಉಚಿತ ವಿದ್ಯುತ್ ನೀಡುವ ಗೃಹಜ್ಯೋತಿ, ನಿರುದ್ಯೋಗ ಯುವ ನಿಧಿ, 10 ಕೆಜಿ ಉಚಿತ ಅಕ್ಕಿ, ಮನೆ ಯಜಮಾನಿಗೆ ಮಾಸಿಕ 2 ಸಾವಿರ ರೂ. ಗೃಹಲಕ್ಷ್ಮಿ ಯೋಜನೆ, ಮಹಿಳೆಯರಿಗೆ ಉಚಿತ ಬಸ್‌ಪಾಸ್‌ನ ಶಕ್ತಿ ಗ್ಯಾರಂಟಿ ಯೋಜನೆ ಜತೆಗೆ ವಿವಿಧ ವರ್ಗಗಳ ಮೀಸಲಾತಿ ಪ್ರಮಾಣವನ್ನು ಶೇ. 50 ರಿಂದ ಶೇ. 75ಕ್ಕೆ ಏರಿಸುವ ಪ್ರಸ್ತಾವ ಇಟ್ಟಿದೆ.

ಭ್ರಷ್ಟಾಚಾರ ನಿಗ್ರಹಕ್ಕೆ ಹೊಸ ಕಾನೂನು, ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ವ್ಯವಸ್ಥೆ ಜಾರಿ, ಅಂಗನವಾಡಿ ಕಾರ್ಯಕರ್ತೆಯರಿಗೆ 15 ಸಾವಿರ ರೂ. ಮಾಸಿಕ ಗೌರವ ಧನ, ಬಿಜೆಪಿ ಸರ್ಕಾರ ಜಾರಿ ಮಾಡಿರುವ ಕೃಷಿ ಕಾಯ್ದೆ, ನೂತನ ಶಿಕ್ಷಣ ನೀತಿ ರದ್ದು, ರೈತರಿಗೆ 10 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ, ಹಾಲಿನ ಪ್ರೋತ್ಸಾಹ ದರ 5 ರಿಂದ 7 ರೂ.ಗೆ ಏರಿಕೆ ಮಾಡುವುದಾಗಿ ಹೇಳಿದೆ.

ನೀರಾವರಿ ಯೋಜನೆಗಳಿಗೆ 1.5 ಲಕ್ಷ ಕೋಟಿ ವೆಚ್ಚ, ಕೃಷಿ ಉತ್ಪನ್ನಗಳ ಬೆಲೆ ನಿಗದಿಗೆ ಪ್ರತಿ ವಿಭಾಗದಲ್ಲೂ ಕೃಷಿ ಬೆಲೆ ಆಯೋಗ ಸ್ಥಾಪನೆ, ಪೊಲೀಸರಿಗೆ ವರ್ಷಕ್ಕೆ ಒಂದು ತಿಂಗಳ ಹೆಚ್ಚುವರಿ ವೇತನ, ಖಾಲಿ ಇರುವ ಸರ್ಕಾರಿ ಹುದ್ದೆಗಳ ಭರ್ತಿ ಸೇರಿದಂತೆ ಹತ್ತು ಹಲವು ವಾಗ್ದಾನಗಳನ್ನು ನೀಡಿದೆ. (3ನೇ ಪುಟಕ್ಕೆ)

## ರಾಜ್ಯದಲ್ಲಿ ಐದು ದಿನ ಹಗುರ ಮಳೆ

ಬೆಂಗಳೂರು, ಮೇ 2 - ರಾಜ್ಯದ ಉತ್ತರ ಒಳನಾಡು ಮತ್ತು ಕರಾವಳಿಯಲ್ಲಿ ಇಂದಿನಿಂದ ಐದು ದಿನ ಹಗುರದಿಂದ ಕೂಡಿದ ಸಾಧಾರಣ ಮಳೆಯಾಗುವ (2ನೇ ಪುಟಕ್ಕೆ)

## ಕಾಂಗ್ರೆಸ್‌ಗೆ ಉಗ್ರವಾದಿ ಓಲೈಕೆ ಇತಿಹಾಸ : ಮೋದಿ

ಚಿತ್ರದುರ್ಗ, ಮೇ 2 – ಕಾಂಗ್ರೆಸ್ ಪಕ್ಷವು ಉಗ್ರವಾದ ಹಾಗೂ ಉಗ್ರವಾದಿಗಳ ಓಲೈಸುವ ಇತಿಹಾಸ ಹೊಂದಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಚಿತ್ರದುರ್ಗದಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಸರ್ಜಿಕಲ್ ದಾಳಿ ಹಾಗೂ ವೈಮಾನಿಕ ದಾಳಿಗಳನ್ನು ನಡೆಸಿದಾಗ ಕಾಂಗ್ರೆಸ್ ರಕ್ಷಣಾ ಪಡೆಗಳನ್ನು ಪ್ರಶ್ನಿಸಿದೆ ಎಂದು ಹೇಳಿದರು.



ಕಾಂಗ್ರೆಸ್ ಪಕ್ಷದ ಇತಿಹಾಸ ಹಾಗೂ ಚಿಂತನೆಯನ್ನು ರಾಜ್ಯದ ಜನರು ಎಂದೂ ಮರೆಯಬಾರದು. ದೆಹಲಿಯಲ್ಲಿ ಬಾಟ್ಲಾ ಹೌಸ್ ಕಾರ್ಯಾಚರಣೆ ನಡೆದಾಗ, ಉಗ್ರವಾದಿಗಳ ಸಾವಿನ ಸುದ್ದಿ ಬಂದಾಗ ಕಾಂಗ್ರೆಸ್‌ನ ಸರ್ವೋಚ್ಛ ನಾಯಕಿಯ ಕಣ್ಣಲ್ಲಿ ನೀರು ಬರುತ್ತಿತ್ತು ಎಂದವರು ಟೀಕಿಸಿದರು.

ಸರ್ಜಿಕಲ್ ದಾಳಿ ನಡೆದಾಗ ಹಾಗೂ ವೈಮಾನಿಕ ದಾಳಿ ನಡೆದಾಗ ಕಾಂಗ್ರೆಸ್ ಪಕ್ಷ ದೇಶದ ರಕ್ಷಣಾ ಪಡೆಗಳ ಸಾಮರ್ಥ್ಯವನ್ನು ಪ್ರಶ್ನಿಸಿತ್ತು ಎಂದೂ ಅವರು ನೆನಪಿಸಿದರು.

ಕರ್ನಾಟಕದಲ್ಲೂ (2ನೇ ಪುಟಕ್ಕೆ)

## ಕಾಂಗ್ರೆಸ್ ಬಂಡಾಯ : ಎಂ.ಪಿ. ಲತಾ, ರಾಜೇಶ್, ಸವಿತಾಬಾಯಿ ಉಚ್ಚಾಟನೆ




ಬೆಂಗಳೂರು, ಮೇ 2 – ಕಾಂಗ್ರೆಸ್‌ನ 24 ಬಂಡಾಯ ಅಭ್ಯರ್ಥಿಗಳನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ರಾಜ್ಯ ಕಾಂಗ್ರೆಸ್ ಶಿಸ್ತು ಸಮಿತಿ ಈ ನಿರ್ಧಾರ ತೆಗೆದುಕೊಂಡಿದೆ. ಈ 24 ಅಭ್ಯರ್ಥಿಗಳ ಜೊತೆ ಪ್ರಚಾರದಲ್ಲಿ ಭಾಗವಹಿಸಿದರೆ ಅಂಥವರ ವಿರುದ್ಧವೂ ಶಿಸ್ತು ಕ್ರಮ ತೆಗೆದುಕೊಳ್ಳುವುದಾಗಿ ಸಮಿತಿ ಅಧ್ಯಕ್ಷ ಕೆ. ರೆಹಮಾನ್ ಖಾನ್ ತಿಳಿಸಿದ್ದಾರೆ.


ಹರಪನಹಳ್ಳಿಯಿಂದ ಸ್ಪರ್ಧಿಸಿದ್ದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹಾಗೂ ಜಗಳೂರಿನಿಂದ ಸ್ಪರ್ಧಿಸಿದ್ದ ಮಾಜಿ ಶಾಸಕ ಹೆಚ್.ಪಿ. ರಾಜೇಶ್, ಮಾಯಕೊಂಡದಿಂದ ಸ್ಪರ್ಧಿಸಿದ್ದ ಸವಿತಾ ಬಾಯಿ ಮಲ್ಲೇಶ್ ನಾಯಕ್ ಉಚ್ಚಾಟಿತರಲ್ಲಿ ಸೇರಿದ್ದಾರೆ.

## ಆಧಾರ್‌ನ ಮೊಬೈಲ್ ಮಾಹಿತಿ ಪರಿಶೀಲಿಸಲು ಸೌಲಭ್ಯ

ನವದೆಹಲಿ, ಮೇ 2 – ಸಾರ್ವಜನಿಕರು ತಮ್ಮ ಆಧಾರ್ ಸಂಖ್ಯೆಯ ಜೊತೆ ಜೋಡಣೆ ಮಾಡಿರುವ ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐ.ಡಿ.ಗಳನ್ನು ಪರಿಶೀಲಿಸುವ ಸೌಲಭ್ಯ ಕಲ್ಪಿಸಲಾಗಿದೆ. (3ನೇ ಪುಟಕ್ಕೆ)


## ಶ್ರೀಮತಿ ಕೆ.ಜಿ.ಲಲಿತಮ್ಮ ನಿಧನ



ದಿ|| ಶ್ರೀಮತಿ ಕೆ.ಜಿ. ಲಲಿತಮ್ಮ

ದಾವಣಗೆರೆ ನೂತನ ಕಾಲೇಜು ರಸ್ತೆ ಆಂಜನೇಯ ಬಡಾವಣೆ ವಾಸಿ ದಿ|| ಕೆ.ಜಿ.ಮರುಳನಗೌಡ್ರು ತ್ಯಾವಣಿಗೆ ಇವರ ಧರ್ಮಪತ್ನಿ ಶ್ರೀಮತಿ ಕೆ.ಜಿ. ಲಲಿತಮ್ಮ ಇವರು ದಿನಾಂಕ: 02-05-2023ನೇ ಮಂಗಳವಾರ ಬೆಳಗ್ಗೆ 10.30ಕ್ಕೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 92 ವರ್ಷ ವಯಸ್ಸಾಗಿದ್ದು, ಇಬ್ಬರು ಗಂಡು ಮಕ್ಕಳು, ಎಂಟು ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಆಗಲಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 03–05–2023ನೇ ಬುಧವಾರ ಬೆಳಿಗ್ಗೆ 10.00ಕ್ಕೆ ತ್ಯಾವಣಿಗೆಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖ ತಪ್ತರು

ಕೆ.ಜಿ.ಕೊಟ್ರೇಗೌಡ ಹಾಗೂ ಕುಟುಂಬದವರು, ತ್ಯಾವಣಿಗೆ
ಡಾ|| ಕೆ.ಜಿ.ಗಂಗಾಧರ ಗೌಡ, ತ್ಯಾವಣಿಗೆ, ಡಾ|| ಸೀಮಾ, ತ್ಯಾವಣಿಗೆ,
ಕೆರೆಯಾಗಳಹಳ್ಳಿ ಗೌಡರ ವಂಶಸ್ಥರು.

ಮೊ: 6362470061, 9844119282.

|| ಶ್ರೀ ಶಿವನಾರದಮುನಿ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕು ರಾಂಪುರ ಗ್ರಾಮದ ವಾಸಿ

ರಾಂಪುರ ಗೌಡ್ರ ಆರ್.ಜಿ. ಪ್ರಭಾಕರ ಮತ್ತು ಸಹೋದರರು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 25-04-2023ನೇ ಮಂಗಳವಾರ ರಾತ್ರಿ 9-20 ಗಂಟೆಗೆ ನಮ್ಮ ಪೂಜ್ಯ ಅಣ್ಣನವರಾದ ಹಾಗೂ ದಿ|| ಆರ್.ಜಿ. ಮಹಾದೇವಪ್ಪನವರ ಮಗ



ಶರಣ ಆರ್.ಜಿ. ಚಂದ್ರಶೇಖರಪ್ಪನವರು

(ಜಮೀನ್ದಾರರು)

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 03-05-2023ನೇ ಬುಧವಾರ ಬೆಳಿಗ್ಗೆ 10-30 ಗಂಟೆಗೆ ದಾವಣಗೆರೆ ತಾಲ್ಲೂಕು ರಾಂಪುರ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು, ದಿ|| ಆರ್.ಜಿ. ಮಹಾದೇವಪ್ಪನವರ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ರಾಂಪುರ ಗೌಡ್ರ ವಂಶಸ್ಥರು, ರಾಂಪುರ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂದ : ಆರ್.ಜಿ. ನರೇಂದ್ರ ಮತ್ತು ಕುಟುಂಬದವರು
ರಾಂಪುರ, ದಾವಣಗೆರೆ ತಾಲ್ಲೂಕು - ಜಿಲ್ಲೆ. ಮೊ. : 9902773908

# ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು

## ಮಲೇಬೆನ್ನೂರಿನಲ್ಲಿ ಕಾಂಗ್ರೆಸ್ ವೀಕ್ಷಕ ಅಸ್ಸನ್ ಮೌಲಾನ ಕರೆ



ಮಲೇಬೆನ್ನೂರು, ಮೇ. 2 - ಹರಿಹರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್ ಅವರನ್ನು ಗೆಲ್ಲಿಸಲು ಪಕ್ಷದ ಮುಖಂಡರು, ಕಾರ್ಯಕರ್ತರು ಒಟ್ಟಾಗಿ ಹಗಲಿರುಳು ಹೋರಾಟ ಮಾಡುವಂತೆ ಕಾಂಗ್ರೆಸ್ ವೀಕ್ಷಕ ಹಾಗೂ ತಮಿಳುನಾಡು ಶಾಸಕ ಅಸ್ಸನ್ ಮೌಲಾನ ಮನವಿ ಮಾಡಿದರು.

ನಿನ್ನೆ ಇಲ್ಲಿ ಏರ್ಪಾಡಾಗಿದ್ದ ಕಾಂಗ್ರೆಸ್ ಮುಖಂಡರ, ಕಾರ್ಯಕರ್ತರ ಹಾಗೂ ಪುರಸಭೆ ಸದಸ್ಯರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಚುನಾವಣೆ ಪ್ರಚಾರಕ್ಕೆ 6 ದಿನ ಬಾಕಿ ಇದ್ದು, ಎಲ್ಲರೂ ದಿನಪೂರ್ತಿ ಪ್ರಚಾರ ಮಾಡಬೇಕು. ವ್ಯಕ್ತಿ ಮುಖ ನೋಡದೆ ಪಕ್ಷದ ತತ್ವ, ಸಿದ್ಧಾಂತಗಳನ್ನು ಹಾಗೂ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಿಳಿಸಿ ಪಕ್ಷ ಗೆಲ್ಲಿಸಲು ಕೆಲಸ ಮಾಡಿ ಎಂದು ಅಸ್ಸನ್ ಹೇಳಿದರು.

ಶಾಸಕ ಎಸ್.ರಾಮಪ್ಪ ಮಾತನಾಡಿ, ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಸ್ಪಷ್ಟ ಸೂಚನೆ ಇದೆ ಎಂದು ಹೇಳಿದರು.

ತಾ.ಪಂ. ಮಾಜಿ ಅಧ್ಯಕ್ಷ ಎಂ.ಬಿ. ರೋಷನ್ ಸಾಬ್, ಜಿ.ಪಂ. ಮಾಜಿ ಸದಸ್ಯ ನಾಗೇಂದ್ರಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ ಮಾತನಾಡಿ, ಅಭ್ಯರ್ಥಿ ಶ್ರೀನವಾಸ್ ಅವರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜವಾಬ್ದಾರಿ ನೀಡುವ ಕೆಲಸ ಮಾಡಿದಾಗ ಮಾತ್ರ ಚುನಾವಣೆ ಸುಲಭವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಸಹಕಾರಿ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಪುರಸಭೆ ಸದಸ್ಯರಾದ ಸಾಬೀರ್ ಅಲಿ, ನಯಾಜ್ ಖಲೀಲ್, ದಾದಾಪೀರ್ ಷಾ ಅಬ್ರಾರ್, ಭೋವಿ ಶಿವು, ಕೆ.ಕಿ ಲೋಕೇಶ್, ಭೋವಿ ಕುಮಾರ್, ಮುಖಂಡರಾದ ದೇವರಬೆಳಕೆರೆ ಮಹೇಶ್ವರಪ್ಪ, ಕುಣೇಬೆಳಕೆರೆ ರುದ್ರಣ್ಣ, ಹಕ್ಕಿಂ ಸಾಬ್ ತಳಸದ ಬಸವರಾಜ್, ಕೆ.ಜಿ. ಮಂಜುನಾಥ್ ಫಾಜಿಲ್, ಎಳೆಹೊಳೆ ಕುಮಾರ್, ಪಿ.ಹೆಚ್. ಶಿವಕುಮಾರ್, ಪಿ.ಆರ್.ಕುಮಾರ್, ಕುಂಬಳೂರು ವಾಸು, ಎ.ಕೆ. ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು.

# ನಾನು ಹಿಂದೆ ಮಾಡಿದ್ದ ಅಭಿವೃದ್ಧಿ ಯೋಜನೆಗಳೇ ಈ ಬಾರಿಯ ನನ್ನ ಗೆಲುವಿಗೆ ಸಹಕಾರಿಯಾಗಲಿವೆ

ಮಲೇಬೆನ್ನೂರು, ಮೇ 2- ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಹರಿಹರ ಕ್ಷೇತ್ರದಲ್ಲಿ ಆದ ಅಭಿವೃದ್ಧಿ ಕೆಲಸಗಳು ಈ ಬಾರಿ ನನ್ನ ಗೆಲುವಿಗೆ ಸಹಕಾರಿಯಾಗಲಿವೆ ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ನೀರಾವರಿ ಇಲಾಖೆಯ ಕಛೇರಿ ಎದುರು ನಿನ್ನೆ ಏರ್ಪಾಡಾಗಿದ್ದ ಬಿಜೆಪಿ ಕಛೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಹಿಂದೆ ಶಾಸಕರಾದವರು ಮತ್ತು ಈಗಿನ ಶಾಸಕರು ಜನರಿಗೆ ಉಪಯೋಗ ಆಗುವಂತಹ ಯಾವ ಮಹತ್ತರ ಯೋಜನೆಗಳನ್ನೂ ಮಾಡಿಲ್ಲ. ಬರೀ ಆರೋಪ ಮಾಡುವುದರಲ್ಲೇ ಕಾಲ ಕಳೆದಿದ್ದಾರೆ ಎಂದು ಅವರು ಟೀಕಿಸಿದರು.

ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ನೀವು ನನ್ನನ್ನು ಆಯ್ಕೆ ಮಾಡಿದರೆ ರಸ್ತೆಗಳ ಅಭಿವೃದ್ಧಿ ಸೇರಿದಂತೆ ಭೈರನಪಾದ ಏತ ನೀರಾವರಿ ಯೋಜನೆ ಹಾಗೂ ಕೆರೆಗಳನ್ನು ಅಭಿವೃದ್ಧಿಪಡಿಸಿ ನೀರು ತುಂಬಿಸುವ ಯೋಜನೆಗಳಿಗೆ ಮೊದಲ ಆದ್ಯತೆ ನೀಡುವುದಾಗಿ ಭರವಸೆ ನೀಡಿದರು.

ಕಾಂಗ್ರೆಸ್ ಅಭ್ಯರ್ಥಿ ಜನರನ್ನು ಭೇಟಿ ಮಾಡದೆ ರೋಡ್ ಶೋ ಮಾತ್ರ ಮಾಡುತ್ತಿದ್ದಾರೆ. ಇವರ ಈ ವರ್ತನೆಯನ್ನು ಕ್ಷೇತ್ರದ ಜನ ಖಂಡಿಸುತ್ತಿದ್ದು, ಈ ಬಾರಿ ನನ್ನ ಗೆಲುವು ಸೂರ್ಯನಷ್ಟೇ ಸತ್ಯವಾಗಲಿದೆ ಎಂದು ಹರೀಶ್ ಹೇಳಿದರು.

ಚುನಾಯಿತರಾದವರ ನಿರ್ಲಕ್ಷ್ಯದಿಂದಾಗಿ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರು ನೀರಿನ ಕೊರತೆ ಅನುಭವಿಸುತ್ತಿದ್ದು, ಭತ್ತದ ಬೆಳೆ ಒಣಗುತ್ತಿವೆ. ನಾನು ಶಾಸಕನಾಗಿದ್ದಾಗ ಇಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಂಡಿದ್ದೆ ಎಂದು ಹರೀಶ್ ಹೇಳಿದರು.



**ಹರಿಹರದ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ವಿಶ್ವಾಸ**

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಮಾತನಾಡಿ, ಈಗ ಉಳಿದಿರುವ 6 - 7 ದಿನಗಳಲ್ಲಿ ಬಿಜೆಪಿ ಕಾರ್ಯಕರ್ತರು ಮತ್ತೊಮ್ಮೆ ಮತದಾರರನ್ನು ಭೇಟಿ ಮಾಡಿ ಬಿಜೆಪಿಗೆ ಮತ ಹಾಕುವಂತೆ ಮನವೊಲಿಸಿ ಎಂದು ಕರೆ ನೀಡಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಈ ಬಾರಿ ಅಲ್ಪಸಂಖ್ಯಾತರೂ ಹರೀಶ್ ಅವರನ್ನು ಬೆಂಬಲಿಸುತ್ತಿರುವುದು ಗೆಲುವಿನ ಸೂಚನೆ ಆಗಿದ್ದು, ಹರೀಶ್ ಅವರು 25 ಸಾವಿರ ಮತಗಳ ಅಂತರದಿಂದ ಗೆಲ್ಲಲಿದ್ದಾರೆ ಎಂದರು.

ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪ್ರಧಾನ ಕಾರ್ಯದರ್ಶಿ ಆದಾಪುರ ವೀರೇಶ್, ರೈಸ್‌ಮಿಲ್ ಮಾಲೀಕ ಯಕ್ಕನಹಳ್ಳಿ ಬಸವರಾಜಪ್ಪ, ಎನ್ ಶಿವನಗೌಡ್ರು, ವೈ. ರಂಗನಾಥ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಬೆಣ್ಣೆಹಳ್ಳಿ ಸಿದ್ದೇಶ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಬಿ. ಸುರೇಶ್, ಓ.ಜಿ. ಕುಮಾರ್, ಭೋವಿ ಮಂಜಣ್ಣ, ಬೆಣ್ಣೆಹಳ್ಳಿ ಬಸವರಾಜ್, ಎ.ಕೆ. ನಾಗರಾಜ್, ಜಿಗಳಿ ಹನುಮಗೌಡ, ಕೊಮಾರನಹಳ್ಳಿ ಸುನೀಲ್, ಹೆಚ್. ಪಿ. ಮಂಜು, ಚಾಮುಂಡಿ, ಜಿ. ಬೇವಿನಹಳ್ಳಿಯ ಸಂತೋಷ್ ತಾಳೇದ್ಯ, ಕುಂಬಳೂರು ಅಶೋಕ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ನಾನು ಅಪ್ಪ, ಅಣ್ಣನ ಹೆಸರೇಳಿ ಮತ ಕೇಳುತ್ತೇನೆ : ಎಂ.ಪಿ.ಲತಾ



ಹರಪನಹಳ್ಳಿ, ಮೇ 2- 'ನಾನು ನನ್ನ ತಂದೆ ಎಂ.ಪಿ. ಪ್ರಕಾಶ್ ಮತ್ತು ಸಹೋದರ ಎಂ.ಪಿ.ರವೀಂದ್ರ ಅವರುಗಳ ಹೆಸರನ್ನು ಮಾತ್ರ ಬಳಸಿಕೊಂಡು ಮತ ಕೇಳುತ್ತೇನೆಯೇ ಹೊರತು ಬೇರೆ ಯಾರ ಹೆಸರನ್ನೂ ಬಳಸಿಕೊಳ್ಳುತ್ತಿಲ್ಲ' ಎಂದು ಪಕ್ಷೇತರ ಅಭ್ಯರ್ಥಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಇಂದು ನಡೆದ ಮುಸ್ಲಿಂ ಸಮಾಜದವರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪುರಸಭಾ ಸದಸ್ಯ ಡಿ.ಅಬ್ದುಲ್ ರಹಿಮಾನ್ ಸಾಬ್, ಅಂಜುಮನ್ ಸಂಸ್ಥೆಯ ಮಾಜಿ ಅಧ್ಯಕ್ಷ ಸಿ.ಜಾವೇದ್ ಮಾತನಾಡಿದರು.

ಎಚ್.ಎಂ.ಮಲ್ಲಿಕಾರ್ಜುನ, ಪುರಸಭಾ ಸದಸ್ಯ ಲಾಟಿ ದಾದಾಪೀರ್, ವಕೀಲ ಮುಜಬುರ್ ರಹಿಮಾನ್, ನವರಂಗ, ಶಮಿಉಲ್ಲಾ, ಶಿರಹಟ್ಟಿ ಜಾಕೀರ್, ನಿಜಾಮ್, ಅಪ್ತಾಬ್, ಇರ್ಷಾದ್ ಭಾಷ, ಪುರಸಭಾ ಸದಸ್ಯರಾದ ಎಂ.ವಿ.ಅಂಜಿನಪ್ಪ, ಟಿ. ವೆಂಕಟೇಶ, ಗಣೇಶ, ತಾ.ಪಂ ಮಾಜಿ ಅಧ್ಯಕ್ಷ ಮೈದೂರು ಕುಬೇರಪ್ಪ, ಹಳ್ಳಿಕೇರಿ ಎಚ್. ರಾಜಪ್ಪ, ಮುಖಂಡರಾದ ಕೆ.ಚಂದ್ರೇಗೌಡ, ಬಿ.ಕೆ.ಪ್ರಕಾಶ, ಚಿಕ್ಕೇರಿ ಬಸಪ್ಪ, ರಿಯಾಜ್, ಎಲ್. ಮಂಜಾನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

# ಸಮಾಜ, ದೇಶವನ್ನು ಒಡೆಯುವುದೇ ಬಿಜೆಪಿ ಉದ್ದೇಶ

## ಲೆನಿನ್ ನಗರದ ಪ್ರಚಾರ ಕಾರ್ಯದಲ್ಲಿ ಕಿಡಿ ಕಾರಿದ ಉತ್ತರದ ಕಾಂಗ್ರೆಸ್ ಅಭ್ಯರ್ಥಿ ಮಲ್ಲಿಕಾರ್ಜುನ್

ದಾವಣಗೆರೆ, ಮೇ 2- ಸಮಾಜ ಮತ್ತು ದೇಶವನ್ನು ಒಡೆಯುವುದು ಬಿಜೆಪಿಯ ಉದ್ದೇಶ. ಸಮಾಜದ ಬೆಳವಣಿಗೆಗೆ ಯಾವತ್ತೂ ಅದು ಕೆಲಸ ಮಾಡಿಲ್ಲ. ದೇಶವನ್ನು ಒಡೆಯುವ ಗುರಿಯನ್ನು ಹೊಂದಿರುವ ಏಕರೂಪ ನಾಗರಿಕ ಸಂಹಿತೆ ಯನ್ನು (ಯುಸಿಸಿ) ಜಾರಿಗೆ ತರುವುದಾಗಿ ಪಕ್ಷದ ಪ್ರಣಾಳಿಕೆಯು ಭರವಸೆ ನೀಡುತ್ತದೆ. ಇದು ಕೇಸರಿ ಪಕ್ಷದ ಪರ ಧ್ರುವೀಕರಣಕ್ಕಾಗಿ ಮಾತ್ರ ಎಂದು ದಾವಣಗೆರೆ ಉತ್ತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್.ಮಲ್ಲಿಕಾರ್ಜುನ್ ಆರೋಪಿಸಿದರು.



ನಗರ ಪಾಲಿಕೆಯ 36ನೇ ವಾರ್ಡ್‌ನ ಲೆನಿನ್‌ನಗರ, ಶ್ರೀನಿವಾಸ ಬಡಾವಣೆ ಸೇರಿದಂತೆ ವಿವಿಧ ಕಡೆಗಳಲ್ಲಿ ಮನೆ-ಮನೆಗೆ ತೆರಳಿ ಮತ ಯಾಚಿಸಿದ ನಂತರ ಮತದಾರರನ್ನುದ್ದೇಶಿಸಿ ಅವರು ಮಾತನಾಡಿದರು. ಇಂತಹ ಕಾನೂನಿನಿಂದ ಕಾರ್ಮಿಕರು ಮತ್ತು ಕಾರ್ಮಿಕ ವರ್ಗದವರಿಗೆ ತೊಂದರೆಯಾಗುತ್ತಿದೆ. ಮಹಿಳೆಯರ ಸುರಕ್ಷತೆಯನ್ನು ಪರಿಗಣಿಸಿ ಈ ಹಿಂದೆ ಅನುಮತಿ ನೀಡಿರಲಿಲ್ಲ. ಸರ್ಕಾರ ಬಲವಂತವಾಗಿ ಇಂತಹ ಕಾನೂನು ತರುತ್ತಿದೆ. ಕೇಂದ್ರ ಸರ್ಕಾರ ಅವರಿಗೆ ಸಾಮಾಜಿಕ ಭದ್ರತೆಯ ಪರಿಕಲ್ಪನೆಯನ್ನು ಕಡೆಗಣಿಸಿದೆ ಎಂದು ಅವರು ದೂರಿದರು.

ಶ್ರೀಮಂತರ ಆದಾಯವು ಶೇ 70 ರಷ್ಟು ಹೆಚ್ಚಾಗಿದೆ. ಆದರೆ, ಕಾರ್ಮಿಕರ ವೇತನವು ಕೇವಲ ಶೇ 5 ರಷ್ಟು ಹೆಚ್ಚಾಗಿದೆ. ಕೇಂದ್ರದ ಆದೇಶವನ್ನು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಪಾಲಿಸುತ್ತಿದೆ. ರಾಜಸ್ಥಾನದ ಕಾಂಗ್ರೆಸ್ ಸರ್ಕಾರವು ಕೇಂದ್ರ ಜಾರಿಗೊಳಿಸಿದ ಕಾರ್ಮಿಕ ವಿರೋಧಿ ಕಾನೂನನ್ನು ಅಂಗೀಕರಿಸಿಲ್ಲ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂ ಡರುಗಳಾದ ಆರ್.ಎಸ್. ಶೇಖರಪ್ಪ, ಬಿ.ಲೋಕೇಶ್, ಲಕ್ಷ್ಮಣ (ಧರ್ಮ), ಪ್ರಸಾದ್, ಆರ್.ಎಸ್. ರಾಕೇಶ್, ಪಿ.ಕೆ.ಲಿಂಗರಾಜ್, ಮಂಜುನಾಥ, ರಹಮತ್‌ವುಲ್ಲಾ, ಜಬೀವುಲ್ಲಾ, ಪ್ರಸನ್ನ, ಹನುಮಂತಗೌಡ, ಶಾಮು ಪೈಲ್ವಾನ್, ದ್ರಾಕ್ಷಾಯಣಮ್ಮ, ಕೆಂಚಮ್ಮ ರಾಜೇಶ್ವರಿ ಮತ್ತಿತರರಿದ್ದರು.

# ಓಲೈಕೆ ಇತಿಹಾಸ: ಮೋದಿ

(1ನೇ ಪುಟದಿಂದ) ಕಾಂಗ್ರೆಸ್ ಉಗ್ರವಾದಕ್ಕೆ ಕುಮ್ಮಕ್ಕು ನೀಡಿದೆ. ಕಾಂಗ್ರೆಸ್ ರಾಜ್ಯವನ್ನು ಉಗ್ರವಾದಿಗಳ ಮರ್ಜಿಗೆ ಬಿಟ್ಟಿತ್ತು. ಬಿಜೆಪಿ ಉಗ್ರರ ಬೆನ್ನು ಮೂಳೆ ಮುರಿದಿದೆ ಹಾಗೂ ಓಲೈಕೆಯ ರಾಜಕೀಯ ಅಂತ್ಯಗೊಳಿಸಿದೆ ಎಂದರು.

ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಉಗ್ರವಾದಕ್ಕೆ ಉತ್ತೇಜನ ನೀಡುತ್ತಿವೆ ಎಂದೂ ಆರೋಪಿಸಿದ ಮೋದಿ, ರಾಜ್ಯ ಸಮೃದ್ಧವಾಗಬೇಕಾದರೆ ಸುರಕ್ಷಿತವಾಗಿರು ವುದು ಅತ್ಯಗತ್ಯ ಎಂದು ತಿಳಿಸಿದರು.

ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳು ಕರ್ನಾಟಕದಲ್ಲಿ ಎಂದೂ ಹೂಡಿಕೆ ಹೆಚ್ಚಿಸಿಲ್ಲ. ಈ ಪಕ್ಷಗಳು ರಾಜ್ಯದ ಯುವಕರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿಲ್ಲ ಎಂದೂ ಪ್ರಧಾನಿ ಹೇಳಿದರು.

ಕಾಂಗ್ರೆಸ್ ಪಕ್ಷದ ಚುನಾವಣಾ ಗ್ಯಾರಂಟಿಯನ್ನು ತರಾಟೆಗೆ ತೆಗೆದುಕೊಂಡ ಅವರು, ಈ ಸುಳ್ಳಿನ ಗ್ಯಾರಂಟಿಗೆ ಯಾವುದೇ ವಾರಂಟಿ ಇಲ್ಲ ಎಂದರು. ಕಾರ್ಯಕ್ರಮದ ವೇದಿಕೆಯ ಮೇಲೆ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಹಾಗೂ ಸಂಸದ ಜಿ.ಎಂ. ಸಿದ್ದೇಶ್ವರ ಮತ್ತಿತರರು ಉಪಸ್ಥಿತರಿದ್ದರು

# 'ದಿ ಕೇರಳ ಸ್ಟೋರಿ' ತಡೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಮೇ 2 – 'ದಿ ಕೇರಳ ಸ್ಟೋರಿ' ಚಲನಚಿತ್ರ ದ್ವೇಷಕಾರಿಯಾಗಿದೆ ಹಾಗೂ ಪ್ರಚಾರದ ಸರಕಾಗಿದೆ. ಇದರ ಬಿಡುಗಡೆ ತಡೆಯಬೇಕು ಎಂಬ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಹಿರಿಯ ವಕೀಲರಾದ ಕಪಿಲ್ ಸಿಬಾಲ್ ಹಾಗೂ ವಕೀಲ ನಜಾಮ್ ಪಾಷಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಈ ಕುರಿತು ಅರ್ಜಿ ದಾಖಲಿಸಿದ್ದರು. ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ.ನಾಗರತ್ನ ಅವರನ್ನು ಒಳಗೊಂಡ ಪೀಠ ಅರ್ಜಿಯ ವಿಚಾರಣೆ ನಡೆಸಿತ್ತು.

ಈ ಚಲನಚಿತ್ರ ಅತ್ಯಂತ ಕೆಟ್ಟ ರೀತಿಯ ದ್ವೇಷ ಭಾಷಣ. ಇದು ಸಂಪೂರ್ಣವಾಗಿ ಶ್ರವಣ – ದೃಶ್ಯಪ್ರಚಾರ ಎಂದು ವಾದಿಸಿದ್ದರು.

ಈ ಅರ್ಜಿಯ ವಿಚಾರಣೆಗೆ ನಿರಾಕರಿಸಿದ ನ್ಯಾಯಾಲಯ, ಹಲವಾರು ರೀತಿಯ ದ್ವೇಷ ಭಾಷಣಗಳಿರುತ್ತವೆ. ಈ ಚಿತ್ರಕ್ಕೆ ಚಲನಚಿತ್ರ ಮಂಡಳಿಯ ಪ್ರಮಾಣ ಪತ್ರ ದೊರೆತಿದೆ. ಪ್ರಸಾರಕ್ಕೆ ಮಂಡಳಿ ಅನುಮತಿ ನೀಡಿದೆ. ವ್ಯಕ್ತಿಯೊಬ್ಬರು ಮನಸೋಇಚ್ಛೆ ಮಾತನಾಡಲು ವೇದಿಕೆ ಕೊಡಲಾಗಿದೆ ಎನ್ನುವಂತಿಲ್ಲ. ಈ ಚಲನಚಿತ್ರ ಬಿಡುಗಡೆ ಪ್ರಶ್ನಿಸುವುದಾದರೆ, ಚಲನಚಿತ್ರಕ್ಕೆ ನೀಡಲಾಗಿರುವ ಪ್ರಮಾಣ ಪತ್ರವನ್ನು ಸೂಕ್ತ ವೇದಿಕೆಯಲ್ಲಿ ಪ್ರಶ್ನಿಸಬೇಕು ಎಂದು ತಿಳಿಸಿದೆ.

ಅರ್ಜಿದಾರರು ಮೊದಲು ಹೈಕೋರ್ಟ್ ಮೊರೆ ಹೋಗಬೇಕು ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದರು. ಆದರೆ, ಶುಕ್ರವಾರವೇ ಚಲನಚಿತ್ರ ಬಿಡುಗಡೆಯಾಗಲಿರುವುದರಿಂದ, ಹೈಕೋರ್ಟ್‌ಗೆ ತೆರಳಲು ಸಮಯವಿಲ್ಲ ಎಂದು ವಕೀಲ ಪಾಷ ವಾದಿಸಿದರು.


ಈ ವಾದಕ್ಕೆ ಆಧಾರವಿಲ್ಲ. ಹಾಗೆ ಹೇಳುವುದಾದರೆ ಪ್ರತಿಯೊಬ್ಬರೂ ಸುಪ್ರೀಂ ಕೋರ್ಟ್‌ಗೆ ಬರಲು ಆರಂಭಿಸುತ್ತಾರೆ ಎಂದು ಪೀಠ ತಿಳಿಸಿತು.


**ಸವಿನೆನಪು**



**ದಿ. ಶ್ರೀಮತಿ ಸುಕನ್ಯಾ ಹೆಚ್.ಎಸ್.**
ಜನನ : 1.07.1968, ಮರಣ : 3.05.2017
ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತಿ : ನರೇಂದ್ರ ಬಿ.ಆರ್.
ತಾಯಿ : ಶ್ರೀಮತಿ ಗೌರಮ್ಮ, ತಂದೆ : ತಿಪ್ಪೇರುದ್ರಪ್ಪ
ಚಿಕ್ಕಪ್ಪ : ಬಿ. ಕೆಂಪೇಗೌಡ ಮತ್ತು ಎಂ.ಎಲ್. ನಾಗರಾಜ್
ಚಿಕ್ಕಮ್ಮ : ಶ್ರೀಮತಿ ನಾಗಮಣಿ ಮತ್ತು ಶ್ರೀಮತಿ ವಿಶಾಲಾಕ್ಷಿ
ಮೈದುನ: ಬಿ.ಆರ್. ಶಿವಕುಮಾರ್, ಶ್ರೀಮತಿ ಜ್ಯೋತಿ,
ಚಂದನ ಹಾಗೂ ಬಂಧು-ಮಿತ್ರರು

**25ನೇ ವರ್ಷದ ಸವಿನೆನಪು**



**ದಿ|| ಎಸ್.ಸಿ.ಬಸಪ್ಪನವರು**
ನೀವು ನಮ್ಮನ್ನಗಲಿ ಇಂದಿಗೆ 25 ವರ್ಷಗಳಾದವು. ನಿಮ್ಮ ಸವಿನೆನಪು ಸದಾ ಹಸಿರಾಗಿದ್ದು, ಸದಾ ನಿಮ್ಮ ಮಾರ್ಗದಲ್ಲೇ ನಡೆಯುತ್ತಿರುವ ನಿಮ್ಮ
**ಮಗ, ಮಗಳು, ಸೊಸೆ ಮತ್ತು ಮೊಮ್ಮಕ್ಕಳು**
ಫೋ.: 95917 59670

**ನೆಶ್ವಿ ಬಸವರಾಜಪ್ಪ ನಿಧನ**



ದಾವಣಗೆರೆ ತಾಲ್ಲೂಕು ನರಗನಹಳ್ಳಿ ಗ್ರಾಮದ ವಾಸಿ
**ನೆಶ್ವಿ ಬಸವರಾಜಪ್ಪ (72)**
ಇವರು ದಿನಾಂಕ 2.5.2023ನೇ ಮಂಗಳವಾರ ಬೆಳಿಗ್ಗೆ 11.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೂವರು ಪುತ್ರರು, ಓರ್ವ ಪುತ್ರಿ, ಸಹೋದರ, ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 3.05.2023ರ ಬುಧವಾರ ಮಧ್ಯಾಹ್ನ 12 ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನರಗನಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ, ಮೊ : 98450 30601**


# ಗ್ರಾಮೀಣರಿಗೆ ಮತದಾನ ಜಾಗೃತಿಗಾಗಿ ಬೈಕ್ ರ್ಯಾಲಿ



ದಾವಣಗೆರೆ, ಮೇ 2 - ಜಿಲ್ಲಾ ಪಂಚಾಯತ್ ಹಾಗೂ ದಾವಣಗೆರೆ ತಾಲ್ಲೂಕು ಪಂಚಾಯಿತಿ ವತಿಯಿಂದ ಗ್ರಾಮೀಣ ಪ್ರದೇಶದ ಮತದಾರರಿಗೆ ಮತದಾನದ ಜಾಗೃತಿ ಮೂಡಿಸುವ ಸಲುವಾಗಿ ಬೈಕ್ ರ್ಯಾಲಿಯನ್ನು ಏರ್ಪಡಿಸಲಾಗಿದ್ದು, ರ್ಯಾಲಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್ ಚಾಲನೆ ನೀಡಿದರು.

ಜಿಲ್ಲಾ ಪಂಚಾಯತ್ ಕಚೇರಿಯಿಂದ ಆರಂಭವಾದ ರ್ಯಾಲಿಯ ಮೂಲಕ ಶಿರಮಗೊಂಡನ ಹಳ್ಳಿ, ಹದಡಿ, ಕೈದಾಳೆ, ಶ್ಯಾಗಲೆ, ಕಂದಗಲ್ಲು, ಬಾಡ, ಅತ್ತಿಗೆರೆ, ಕುರ್ಕಿ, ತೋಳಹುಣಸೆ ಮಾರ್ಗವಾಗಿ ಚಲಿಸಿ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ್, ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ ಆನಂದ್, ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ ಕರಿಬಸಪ್ಪ ಕೆ.ಟಿ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಹರಪನಹಳ್ಳಿಯಲ್ಲಿ ಎನ್‌ಸಿಸಿ ವಿದ್ಯಾರ್ಥಿಗಳಿಂದ ಸ್ವಚ್ಛತೆ




ಹರಪನಹಳ್ಳಿ, ಮೇ 2- ಪುನಿತ್ ಸಾಗರ್ ಅಭಿಯಾನದ ಪ್ರಯುಕ್ತ ಪಟ್ಟಣದ ಯ.ಡಿ.ಬಿ ಕಾಲೇಜ್‌ನ ಎನ್.ಸಿ.ಸಿ ವಿದ್ಯಾರ್ಥಿಗಳಿಂದ ಹಿರೆಕೆರೆಯ ದಂಡೆಯ ಹಾಗೂ ಸುತ್ತಮುತ್ತ ಸ್ವಚ್ಚತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಪ್ರಾಂಶುಪಾಲ ಎಸ್.ಸಿದ್ದಲಿಂಗಮೂರ್ತಿ, ಎನ್.ಸಿ.ಸಿ. ಆಫೀಸರ್ ಬಸವಲಿಂಗಪ್ಪ ಸೇರಿದಂತೆ ಇತರರು ಇದ್ದರು.

# ಕಾಂಗ್ರೆಸ್‌ನಿಂದ ಲಿಂಗಾಯತರ ಬಗ್ಗೆ ಹಗುರ ಮಾತು ಸಲ್ಲದು

ಭರಮಸಾಗರ, ಏ.30- ಕಾಂಗ್ರೆಸ್ ಪಕ್ಷದ ಮುಖಂಡರು ರಾಜ್ಯದ ಪ್ರಮುಖ ಸಮುದಾಯವಾದ ಲಿಂಗಾಯತರ ಬಗೆಗಿನ ಉಡಾಫೆ ಮಾತುಗಳನ್ನು ನಿಲ್ಲಿಸಬೇಕು ಮತ್ತು ಕ್ಷಮೆ ಯಾಚಿಸಬೇಕು ಎಂದು ಹೊಳಲ್ಕೆರೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ ಚಂದ್ರಪ್ಪ ಒತ್ತಾಯಿಸಿದರು.

ಸ್ಥಳೀಯ ವಿದ್ಯಾನಗರದ ಡಿವಿಎಸ್ ಸಭಾಂಗಣದಲ್ಲಿ ಕಾಂಗ್ರೆಸ್ ನಿಂದ ಬಿಜೆಪಿಗೆ ಸೇರ್ಪಡೆಯಾಗುವ ಸಂದರ್ಭದಲ್ಲಿ ಅವರು ಮಾತನಾಡಿದರು.

ಇಸಾಮುದ್ರ ಗ್ರಾಮದ ನ್ಯಾಯಬೆಲೆ ಅಂಗಡಿಯ ಕೆ. ಎಸ್. ಸಿದ್ದಬಸಪ್ಪ, ನಿಜಲಿಂಗಪ್ಪ ಹಾಗೂ ಭರಮಸಾಗರದ ತುರುವನೂರು ಮನೆಯ ಟಿ ಎಸ್ ಮಲ್ಲಣ್ಣ, ಇಸಾಮುದ್ರದ ಕಾಳು ವ್ಯಾಪಾರಿ ಕೃಷ್ಣಪ್ಪ ಮತ್ತು ಇತರರನ್ನು ಚಂದ್ರಪ್ಪ ಅವರು ಬಿಜೆಪಿಯ ಶಾಲನ್ನು ಹಾಕಿ ಪಕ್ಷಕ್ಕೆ ಸ್ವಾಗತಿಸಿದರು.

ನಂತರ ಮಾಜಿ ವಿ ಎಸ್ ಎಸ್ ಕಾರ್ಯದರ್ಶಿ ಎಸ್ ಪ್ರಕಾಶ್ ಮೂರ್ತಿ, ಕೆರ್ನಳ್ಳಿ ಓಂಕಾರಪ್ಪ, ಪದ್ಮನಾಭ ರಾವ್, ಮತ್ತು ಮರಭೆ ಶೆಟ್ರು ಮನೆಗೆ ಹೋಗಿ ಮತಯಾಚನೆ ಮಾಡಿದರು.

ಜಿ.ಪಂ. ಮಾಜಿ ಸದಸ್ಯ ಡಿವಿ ಶರಣಪ್ಪ, ಕೋಗುಂಡೆ ಮಂಜಣ್ಣ, ಸಿರಿಗೆರೆ ಮೋಹನ್, ಚವಳಿಹಳ್ಳಿ ಶೈಲೇಶ್ ಕುಮಾರ್, ಕೊಟ್ರೇಶ್, ಪಿಗ್ನಿ ಚಂದ್ರು, ಡಿವಿ ಪ್ರವೀಣ್ ಕುಮಾರ್, ವೀರೇಶ್, ಲಾಯರ್ ಪನಿಯಪ್ಪ, ಎಂ ಎನ್ ಯಶಸ್, ಹಳವುದರ ತಿಪ್ಪೇಸ್ವಾಮಿ, ಎಸ್ ಸಿದ್ದಲಿಂಗಪ್ಪ, ಪ್ರದೀಪ್ ಕುಮಾರ್, ಅಂಜನಪ್ಪ, ಬಿಜೆಪಿ ಉತ್ಸಾಹಿ ಮುಖಂಡ ಎನ್ ಟಿ ಬಸವರಾಜ್, ತಿಪ್ಪಣ್ಣ, ಟಿ ಪಿ ಕಲ್ಲೇಶ್, ಚಿಕ್ಕಬೆನ್ನೂರು ರಾಜು, ಬಿಜೆಪಿ ಘಟಕದ ಕಾರ್ಯದರ್ಶಿ ವೀರೇಶ್, ಬೆಂಗಳೂರಿನ ಇಸಾಕ್ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



# ರಾಜ್ಯದಲ್ಲಿ ಐದು ದಿನ ಹಗುರ ಮಳೆ

(1ನೇ ಪುಟದಿಂದ) ಸಾಧ್ಯತೆ ಇದ್ದು, ದಕ್ಷಿಣ ಒಳನಾಡಿನಲ್ಲಿ ವ್ಯಾಪಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಗ್ರಾಮಾಂತರ, ಚಾಮರಾಜ ನಗರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಮೈಸೂರು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ನೀಡಲಾಗಿದೆ. ನಾಳೆ ಮತ್ತು ನಾಡಿದ್ದು ಚಾಮರಾಜನಗರ, ಕೊಡಗು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.

# ರಾಣೇಬೆನ್ನೂರು : ರೋಟರಿ ಪದವಿಪೂರ್ವ ಮಹಾವಿದ್ಯಾಲಯಕ್ಕೆ ಶೇ. 90 ರಷ್ಟು ಫಲಿತಾಂಶ



ರಾಣೇಬೆನ್ನೂರು, ಮೇ 2- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಇಲ್ಲಿನ ಟ್ಯಾಗೋರ್ ಶಿಕ್ಷಣ ಸಂಸ್ಥೆಯ ರೋಟರಿ ಪದವಿಪೂರ್ವ ಮಹಾವಿದ್ಯಾಲಯಕ್ಕೆ ಶೇ. 90 ರಷ್ಟು ಫಲಿತಾಂಶ ಲಭಿಸಿದೆ.

ವಾಣಿಜ್ಯ ವಿಭಾಗದಲ್ಲಿ 62 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿದ್ದು 13 ಡಿಸ್ಟಿಂಕ್ಷನ್, 26 ಪ್ರಥಮ ಶ್ರೇಣಿ, 9 ದ್ವಿತೀಯ ಶ್ರೇಣಿ, 9 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಒಟ್ಟು ವಾಣಿಜ್ಯ ವಿಭಾಗದಲ್ಲಿ ಶೇ.93 ರಷ್ಟು ಫಲಿತಾಂಶ ಬಂದಿರುತ್ತದೆ.

ಆದರ್ಶ ಎ. ತಟಪಟ್ಟಿ, 585/600 (ಶೇ.97.5) ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಭೂಮಿಕಾ ಎನ್. ಮಾರನಾಳ 570/600 (ಶೇ.95) ಅಂಕ ಪಡೆದು ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಪೂಜಾ ಪ್ರಮೋದ ಚಾವಡಿಮನಿ 558/600 (ಶೇ.93) ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ಅದೇ ರೀತಿ ವಿಜ್ಞಾನ ವಿಭಾಗದಲ್ಲಿ ಶೇ. 88% ರಷ್ಟು ಫಲಿತಾಂಶ ಬಂದಿರುತ್ತದೆ. 62 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿದ್ದು, 11 ಡಿಸ್ಟಿಂಕ್ಷನ್, 28 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 14 ದ್ವಿತೀಯ ಶ್ರೇಣಿ, 9 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

ನಿಮಿಷಾಂಬ ಎಸ್.ಗುತ್ತಲ 550/600 (ಶೇ. 92) ಅಂಕ ಪಡೆದು ಕಾಲೇಜಿಗೆ ಪ್ರಥಮ, ಸುಮಿತ್ ಕೆ. ಮಾನೆ ಮತ್ತು ಚಿನ್ಮಯಿ ಬಿ.ಕೆ. 542/600 (ಶೇ. 90.2) ಅಂಕ ಗಳಿಸಿ ಕಾಲೇಜಿಗೆ ದ್ವಿತೀಯ, ಕಾರ್ತಿಕ ಬೋಗಾರ 541/600 (ಶೇ. 90) ಅಂಕ ಗಳಿಸಿ ತೃತೀಯ ಸ್ಥಾನ ಪಡೆದಿರುತ್ತಾರೆ.

ಈ ಎಲ್ಲಾ ವಿದ್ಯಾರ್ಥಿಗಳನ್ನು ಆಡಳಿತ ಮಂಡಳಿಯ ಅಧ್ಯಕ್ಷ ಡಾ|| ಬಸವರಾಜ ಎಸ್. ಕೇಲಗಾರ, ಕಾರ್ಯದರ್ಶಿ ಕೆ.ವಿ.ಶ್ರೀನಿವಾಸ, ಪ್ರಾಚಾರ್ಯ ಕೆ.ಎನ್. ಆರಿಕಟ್ಟಿ ಅಭಿನಂದಿಸಿದ್ದಾರೆ.

# ಪಂಚಮಸಾಲಿ ಗುರುಪೀಠಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಭೇಟಿ



ಹರಿಹರ, ಮೇ 2- ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಂಗಳವಾರ ಹನಗವಾಡಿ ಸಮೀಪದ ಪಂಚಮಸಾಲಿ ಗುರುಪೀಠಕ್ಕೆ ಭೇಟಿ ನೀಡಿ, ಶ್ರೀ ವಚನಾನಂದ ಸ್ವಾಮೀಜಿ ಅವರ ಆಶೀರ್ವಾದ ಪಡೆದುಕೊಂಡರು. ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಂಚಮಸಾಲಿ ಪೀಠದ ಧರ್ಮದರ್ಶಿ ಬಿ.ಸಿ.ಉಮಾಪತಿ, ಸಮಾಜದ ಮುಖಂಡ ಪ್ರಕಾಶ್ ಪಾಟೀಲ್ ಈ ವೇಳೆ ಹಾಜರಿದ್ದರು.

# ಮೊಬೈಲ್ ಮಾಹಿತಿ ಪರಿಶೀಲಿಸಲು ಸೌಲಭ್ಯ

**(1ನೇ ಪುಟದಿಂದ)** ಯು.ಐ.ಡಿ.ಎ.ಐ. ವೆಬ್ ತಾಣ ಇಲ್ಲವೇ ಎಂಆಧಾರ್ ಮೊಬೈಲ್ ಆಪ್ ಮೂಲಕ ಈ ಮಾಹಿತಿ ಪರಿಶೀಲಿಸಬಹುದು.

ತಮ್ಮ ಮೊಬೈಲ್ ಸಂಖ್ಯೆ ಆಧಾರ್‌ಗೆ ಜೋಡಣೆಯಾಗಿದೆಯೇ ಎಂಬುದು ಸ್ಪಷ್ಟವಾಗುತ್ತಿಲ್ಲ ಎಂದು ಕೆಲವರು ದೂರಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಒಂದು ವೇಳೆ ಆಧಾರ್‌ಗೆ ಮೊಬೈಲ್ ಸಂಖ್ಯೆ ಜೋಡಣೆಯಾಗಿರದೇ ಇದ್ದರೆ, ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಲಿದೆ.

# ಹಣಕಾಸು ಬಿಕ್ಕಟ್ಟು : ಮೂರು ದಿನ ಗೋ ಫಸ್ಟ್ ಹಾರಾಟ ರದ್ದು

ನವದೆಹಲಿ, ಮೇ 2 – ಹಣಕಾಸು ಬಿಕ್ಕಟ್ಟಿನಲ್ಲಿರುವ ಗೋ ಫಸ್ಟ್ ವಿಮಾನಯಾನ ಸಂಸ್ಥೆಯು, ಬುಧವಾರದಿಂದ ಮೂರು ದಿನಗಳ ಕಾಲ ತನ್ನ ಎಲ್ಲಾ ವಿಮಾನ ಹಾರಾಟಗಳನ್ನು ರದ್ದುಗೊಳಿಸಿದೆ.

ವಿಮಾನಯಾನ ಸಂಸ್ಥೆಯು ದಿವಾಳಿ ಪ್ರಕ್ರಿಯೆಗಾಗಿ ಸ್ವಯಂ ಅರ್ಜಿ ದಾಖಲಿಸಿದೆ. ವಿಮಾನಯಾನ ಸಂಸ್ಥೆಯು ಮೊದಲು ಮೇ 3 ಹಾಗೂ 4ರಂದು ಕಾರ್ಯಾಚರಣೆ ನಿಲ್ಲಿಸುವುದಾಗಿ ತಿಳಿಸಿತ್ತು. ನಂತರ ಇದನ್ನು ಮತ್ತೊಂದು ದಿನ ವಿಸ್ತರಿಸಲಾಗಿದೆ.

ಗೋ ಫಸ್ಟ್ ಪ್ರತಿನಿತ್ಯ 180-185 ವಿಮಾನ ಹಾರಾಟಗಳನ್ನು ನಡೆಸುತ್ತದೆ. ಟಿಕೆಟ್ ಬುಕ್ ಮಾಡಿದವರಿಗೆ ಪೂರ್ಣ ಹಣ ಮರು ಪಾವತಿಸುವುದಾಗಿ ತಿಳಿಸಲಾಗಿದೆ.

ಈ ಹಿಂದೆ ವಿಮಾನಯಾನ ಸಂಸ್ಥೆಯ ಹೆಸರು ಗೋ ಏರ್ ಎಂದಾಗಿತ್ತು. ಕೊರೊನಾ ಸಮಯದ ನಂತರ ವಿಮಾನಯಾನ ಸಂಸ್ಥೆ ತೀವ್ರ ಸಮಸ್ಯೆ ಎದುರಿಸುತ್ತಿದೆ.

2022ರಲ್ಲಿ ವಿಮಾನಯಾನ ಸಂಸ್ಥೆಯು ಮಾರುಕಟ್ಟೆಯಲ್ಲಿ ಶೇ.8.8 ರ ಪಾಲುಗಾರಿಕೆ ಹೊಂದಿತ್ತು. ಈ ವಿಮಾನಯಾನ ಸಂಸ್ಥೆಯಲ್ಲಿ 109.2 ಲಕ್ಷ ಜನರು ಪ್ರಯಾಣಿಸಿದ್ದರು.

ಪ್ರಸಕ್ತ ವಿಮಾನಯಾನ ಸಂಸ್ಥೆ 9 ಸಾವಿರ ಕೋಟಿ ರೂ.ಗಳ ಹೊಣೆಗಾರಿಕೆ ಹೊಂದಿದೆ.

ಮಾರ್ಚ್ 2023ಕ್ಕೆ ಅಂತ್ಯಗೊಂಡ ವರ್ಷದಲ್ಲಿ ಕಂಪನಿಯು 1,800 ಕೋಟಿ ರೂ.ಗಳ ನಷ್ಟ ಎದುರಿಸಿದೆ.

2005-06ರಲ್ಲಿ ಕಾರ್ಯಾರಂಭ ಮಾಡಿದ್ದ ಗೋ ಫಸ್ಟ್ , 2018-19ರಲ್ಲಿ ಅಂತರರಾಷ್ಟ್ರೀಯ ವಿಮಾನಯಾನ ಆರಂಭಿಸಿತ್ತು.

ಪ್ರಾಟ್ ಅಂಡ್ ವೈಟ್ನಿ ಇಂಜಿನ್‌ಗಳ ಗಂಭೀರ ವೈಫಲ್ಯದ ಕಾರಣದಿಂದಾಗಿ ವಿಮಾನಯಾನ ಸಂಸ್ಥೆಯ ಅರ್ಧದಷ್ಟು ವಿಮಾನಗಳ ಕಾರ್ಯನಿರ್ವಹಣೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಹಣಕಾಸು ಹೊಣೆಗಾರಿಕೆ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ವಿಮಾನಯಾನ ಸಂಸ್ಥೆಯು ದಿವಾಳಿ ಪ್ರಕ್ರಿಯೆಗೆ ಮುಂದಾಗಿದೆ.

ದೇಶೀಯವಾಗಿ ವಿಮಾನಯಾನಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ಆದರೆ, ಇಂಜಿನ್ ಪೂರೈಕೆ ಸಮಸ್ಯೆಯಿಂದಾಗಿ ಗೋ ಫಸ್ಟ್ ಸಂಕಷ್ಟಕ್ಕೆ ಗುರಿಯಾಗಿದೆ.

# 44ನೇ ವಾರ್ಡಿನಲ್ಲಿ ಉತ್ತರದ ಬಿಜೆಪಿ ಅಭ್ಯರ್ಥಿ ಪರ ಲತಾ ನಾಗರಾಜ್ ಪ್ರಚಾರ



ದಾವಣಗೆರೆ, ಮೇ 2- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರ ಪತ್ನಿ ಶ್ರೀಮತಿ ಲತಾ ನಾಗರಾಜ್ ಲೋಕಿಕೆರೆ ಅವರು ಇಂದು ಸಹ ವಿವಿಧ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಪತಿ ಪರ ಬಿರುಸಿನ ಮತ ಪ್ರಚಾರ ನಡೆಸಿದರು.

ನಗರ ಪಾಲಿಕೆಯ 44ನೇ ವಾರ್ಡ್ ಶಾಂತಿನಗರ, ವಿನಾಯಕ ನಗರ ಭಾಗಗಳಲ್ಲಿ ಹಾಗೂ ಬಾತಿ ಗ್ರಾಮದಲ್ಲಿ ಬಿಜೆಪಿ ಮಹಿಳಾ ಮುಖಂಡರು, ಕಾರ್ಯಕರ್ತೆಯರ ಜೊತೆಗೂಡಿ ಮತದಾರರ ಪ್ರತಿ ಮನೆಗಳಿಗೆ ಭೇಟಿ ನೀಡಿ ಮನೆ ಮನೆ ಸಂಪರ್ಕದ ಜೊತೆಗೆ ಮತದಾರರ ಮನೆಗಳಲ್ಲಿ ಸಭೆ ನಡೆಸಿದ ಲತಾ ಅವರು ತಮ್ಮ ಪತಿ ನಾಗರಾಜ್ ಲೋಕಿಕೆರೆ ಅವರನ್ನು ಬೆಂಬಲಿಸುವಂತೆ ಕೇಳಿಕೊಂಡರು.

ಈ ವೇಳೆ ನಗರ ಪಾಲಿಕೆ ಸದಸ್ಯರಾದ ಗೌರಮ್ಮ ಗಿರೀಶ್, ವಾರ್ಡ್ ಮುಖಂಡಗಳಾದ ನಲ್ಲಿ ಮಂಜುನಾಥ್, ನಾಗರಾಜ್, ನಂದೀಶ್, ರಾಕೇಶ್, ರಾಮಣ್ಣ, ಶಿವಾನಂದ, ಸುಭಾಷ್, ಹೆಚ್.ಸಿ. ಜಯಮ್ಮ, ಗಾಯತ್ರಿ, ರೇಖಾ ಸುರೇಶ್, ತನು ನಂದೀಶ್, ರಾಜೇಶ್ವರಿ, ಮೇಘನಾ, ದಾಕ್ಷಾಯಿಣಿ, ಮಂಜುಳಾ, ಯಶೋಧ, ಶ್ರೀದೇವಿ, ರಶ್ಮಿ ಪ್ರದೀಪ್, ಪ್ರೀತಿ ಜಗದೀಶ್, ಶ್ವೇತಾ ರಾಘವೇಂದ್ರ ಪಲ್ಗುಣಿ, ಸಾಕಮ್ಮ, ದೇವಕ್ಕ, ಜ್ಯೋತಿ, ಗಾಯತ್ರಿ, ರೇಖಾ ಸುರೇಶ್, ಉಷಾ ಸೇರಿದಂತೆ ಪಕ್ಷದ ಕಾರ್ಯಕರ್ತರು ಲತಾ ನಾಗರಾಜ್ ಲೋಕಿಕೆರೆ ಅವರಿಗೆ ಸಾಥ್ ನೀಡಿದ್ದರು.

# ಕಾಂಗ್ರೆಸ್ ಭರವಸೆಗಳ ಮಹಾಪೂರ

**(1ನೇ ಪುಟದಿಂದ)** ರಾಜ್ಯದಲ್ಲಿ ಮತ್ತೆ ಅಧಿಕಾರದ ಗದ್ದುಗೆ ಏರಲು ಶತಪ್ರಯತ್ನ ನಡೆಸಿರುವ ಕಾಂಗ್ರೆಸ್, ಈ ಚುನಾವಣಾ ಪ್ರಣಾಳಿಕೆಯಲ್ಲಿ ರೈತರು, ಮಹಿಳೆಯರು, ಯುವಕರು, ಪರಿಶಿಷ್ಟ ವರ್ಗ, ಪಂಗಡ, ಅಲ್ಪ ಸಂಖ್ಯಾತರನ್ನು ಓಲೈಸುವ ಪ್ರಯತ್ನದಲ್ಲಿ ನಿರತವಾಗಿದೆ.

ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ, ಕೈ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಮೊದಲ ಸಚಿವ ಸಂಪುಟ ಸಭೆಯಲ್ಲೇ ಪಕ್ಷದ ಭರವಸೆಗಳನ್ನು ಜಾರಿ ಮಾಡುತ್ತೇವೆ, ಇದು ನನ್ನ ವಾಗ್ದಾನ ಎಂದರು.

ಈ ಚುನಾವಣಾ ಪ್ರಣಾಳಿಕೆಯಲ್ಲಿ ಹತ್ತು ಹಲವು ಜನಪರ ಭರವಸೆಗಳನ್ನು ನೀಡಿದ್ದೇವೆ. ಈ ಎಲ್ಲ ಭರವಸೆಗಳನ್ನು ಈಡೇರಿಸುತ್ತೇವೆ. ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ. 15 ರಿಂದ ಶೇ. 17ಕ್ಕೆ. ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ. 3 ರಿಂದ 7ಕ್ಕೆ, ಮುಸ್ಲಿಮರಿಗೆ ಶೇ. 4ರ ಮೀಸಲಾತಿ ಮರುಸ್ಥಾಪನೆ, ಲಿಂಗಾಯತ, ಒಕ್ಕಲಿಗ ಮತ್ತಿತರೆ ಸಮುದಾಯಗಳ ಆಶೋತ್ತರಗಳನ್ನು ಈಡೇರಿಸಲು ಮೀಸಲಾತಿಯನ್ನು ಶೇ. 50 ರಿಂದ 75ಕ್ಕೆ ಹೆಚ್ಚಿಸಲು ಕ್ರಮಕೈಗೊಳ್ಳುವ ಭರವಸೆಯನ್ನು ಪ್ರಣಾಳಿಕೆಯಲ್ಲಿ ನೀಡಿದ್ದೇವೆ ಎಂದರು.

ಹಿಂದಿನ ಕಾಂಗ್ರೆಸ್ ಸರ್ಕಾರ ಸಿದ್ಧಪಡಿಸಿದ ಹಿಂದುಳಿದ ವರ್ಗಗಳ ಜನಗಣತಿ ವರದಿಯನ್ನು ಅನುಷ್ಠಾನಕ್ಕೆ ತರುವುದಾಗಿಯೂ ತಿಳಿಸಿದರು.

ಪರಿಶಿಷ್ಟ ಜಾತಿ, ಪಂಗಡದ ಯುವಕರಿಗೆ ಟ್ಯಾಕ್ಸಿ, ಆಟೋ, ಸರಕು ಸಾಗಾಣೆ ವಾಹನ ಖರೀದಿಗೆ. ಶೇ. 3ರ ಬಡ್ಡಿ ದರದಲ್ಲಿ ಸಾಲ, ಡಾ. ಭೀಮ್‌ರಾವ್ ಅಂಬೇಡ್ಕರ್ ಉದ್ಯಮಶೀಲತಾ ನಿಧಿ ಸ್ಥಾಪನೆ. ಎಸ್‌ಸಿ, ಎಸ್‌ಟಿ ಕಾಯ್ದೆಯ ಸೆಕ್ಷನ್ 7ಡಿ ರದ್ದುಪಡಿಸುವುದಾಗಿ ಹೇಳಿದರು.

ರೈತರಿಗೆ ಬಡ್ಡಿ ರಹಿತ ಸಾಲವನ್ನು 3 ಲಕ್ಷದಿಂದ 10 ಲಕ್ಷಕ್ಕೆ ವಿಸ್ತರಣೆ, ಶೇ. 3ರ ಬಡ್ಡಿ ದರದಲ್ಲಿ 15 ಲಕ್ಷದವರೆಗೂ ಸಾಲ, ಹಾಲಿನ ಪ್ರೋತ್ಸಾಹ ಧನವನ್ನು ಪ್ರತಿ ಲೀಟರ್‌ಗೆ 5 ರೂ.ನಿಂದ 7ರೂ.ಗೆ ಏರಿಕೆ, ಪ್ರತಿ ವಿಭಾಗದಲ್ಲೂ ಕೃಷಿ ಬೆಲೆ ಆಯೋಗ ಸ್ಥಾಪನೆ, ಸ್ವಾಮಿನಾಥನ್ ವರದಿಯಂತೆ ರೈತರ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ ನಿಗದಿ, ಕೃಷಿ ಸಂಬಂಧಿತ ಸ್ಟಾರ್ಟಪ್ ಮತ್ತು ಸಂಶೋಧನೆಗಳ ಉತ್ತೇಜನಕ್ಕೆ 500 ಕೋಟಿ ರೂ.ಗಳ ಕೃಷಿ ಉನ್ನತಿ ನಿಧಿ, ಗ್ರಾಮೀಣ ಪ್ರದೇಶಗಳಿಗೆ 3ಪೇಸ್‌ನಲ್ಲಿ ಹಗಲು ಹೊತ್ತಿನಲ್ಲಿ 8 ಗಂಟೆ ವಿದ್ಯುತ್ ಪೂರೈಕೆಯ ಭರವಸೆ ಜತೆಗೆ ಪ್ರತಿ ಜಿಲ್ಲೆಗೆ 1 ರೈತ ಮಾಲ್‌ಗಳನ್ನು ತೆರೆಯುತ್ತೇವೆ.

ಆಶಾ ಕಾರ್ಯಕರ್ತೆಯರ ಮಾಸಿಕ ಗೌರವ ಧನ ಐದು ಸಾವಿರದಿಂದ ಎಂಟು ಸಾವಿರಕ್ಕೆ ಹೆಚ್ಚಳ, ಬಿಸಿಯೂಟ ಅಡುಗೆಯವರ ಮಾಸಿಕ ಗೌರವ ಧನ 3,600 ರಿಂದ 6 ಸಾವಿರಕ್ಕೆ ಹೆಚ್ಚು ಮಾಡುವ ಭರವಸೆಯನ್ನು ಕಾಂಗ್ರೆಸ್ ನೀಡಿದೆ.

ನೀರಾವರಿ ಯೋಜನೆಗಳಿಗೆ 5 ವರ್ಷಗಳಲ್ಲಿ 1.5 ಲಕ್ಷ ಕೋಟಿ ರೂ. ಒದಗಿಸುವ ಜತೆಗೆ ಮೇಕೆದಾಟು, ಮಹಾದಾಯಿ ಯೋಜನೆ ಜಾರಿ, ಎತ್ತಿನಹೊಳೆ ಯೋಜನೆಯನ್ನು 2 ವರ್ಷಗಳಲ್ಲಿ ಸಂಪೂರ್ಣಗೊಳಿಸುವ ಭರವಸೆಯನ್ನು ಕಾಂಗ್ರೆಸ್ ನೀಡಿದೆ

ಪಿಯುಸಿಯಿಂದ ಉನ್ನತ ಶಿಕ್ಷಣದವರೆಗೆ ಎಲ್ಲ ವಿದ್ಯಾರ್ಥಿನಿಯರಿಗೆ ಉಚಿತ ಲ್ಯಾಪ್‌ಟಾಪ್, ವಿಶ್ವವಿದ್ಯಾಲಯಗಳ ಉನ್ನತೀಕರಣಕ್ಕೆ 2 ಸಾವಿರ ಕೋಟಿಗಳ ಆವರ್ತ ನಿಧಿ, ಸರ್ಕಾರಿ ಮತ್ತು ಅನುದಾನಿತ ಶಾಲಾ-ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಮತ್ತು ಬೋಧಕೇತರ ಹುದ್ದೆಗಳಿಗೆ ನೇಮಕಾತಿ ಭರವಸೆ ನೀಡಿದೆ. ಬಿಜೆಪಿ ಸರ್ಕಾರ ಜಾರಿ ಮಾಡುವ ನೂತನ ಶಿಕ್ಷಣ ನೀತಿಯನ್ನು ರದ್ದು ಮಾಡಿ ಕರ್ನಾಟಕ ಶಿಕ್ಷಣ ನೀತಿಯ ಅನುಷ್ಠಾನಗೊಳಿಸುವುದಾಗಿ ತಿಳಿಸಿದರು.

ಪ್ರತಿ ಕಂದಾಯ ವಿಭಾಗಗಳಲ್ಲಿ ತಲಾ 1 ಜಯದೇವ ರೀತಿಯ ಹೃದ್ರೋಗ, ಕಿದ್ವಾಯಿ ಮಾದರಿಯ ಕ್ಯಾನ್ಸರ್, ನಿಮ್ಹಾನ್ಸ್ ಮಾದರಿಯ ಮನೋರೋಗ ಮತ್ತು ಮಿದುಳು ಚಿಕಿತ್ಸಾ ಆಸ್ಪತ್ರೆ ಸ್ಥಾಪನೆಯ ಭರವಸೆ ಜತೆಗೆ ಡಾ. ಪುನೀತ್‌ರಾಜ್‌ಕುಮಾರ್ ಹೃದಯ ಆರೋಗ್ಯ ಯೋಜನೆ ಜಾರಿಗೆ ತರಲಾಗುವುದು.

ಬಡವರ ಮನೆ ನಿರ್ಮಾಣ ಯೋಜನೆಯ ಸಬ್ಸಿಡಿಯನ್ನು 3 ಲಕ್ಷಕ್ಕೆ ಹೆಚ್ಚಳ, ರಾಜ್ಯ ಸರ್ಕಾರದಿಂದ ನಿರ್ಮಿಸುವ ವಸತಿ ಯೋಜನೆಗಳ ಸಬ್ಸಿಡಿ 3.5 ಲಕ್ಷಕ್ಕೆ ನಿಗದಿ ಮಾಡುವ ಭರವಸೆ ನೀಡಿದೆ.

ಬೀದಿ ಬದಿ ವ್ಯಾಪಾರಿಗಳಿಗೆ ಒಂದು ಬಾರಿ ನೆರವಿನ ರೂಪದಲ್ಲಿ 20 ಸಾವಿರ ಅನುದಾನ, ಆಟೋ ಮತ್ತು ಟ್ಯಾಕ್ಸಿ ಚಾಲಕರ ಮಂಡಳಿ ಸ್ಥಾಪನೆ, ಪ್ರವಾಸೋದ್ಯಮ ಅಭಿವೃದ್ಧಿ ನಿಟ್ಟಿನಲ್ಲಿ ಹೋಂ ಸ್ಟೇ ಮಾಲೀಕರಿಗೆ ಶೇ. 5ರ ಬಡ್ಡಿ ದರದಲ್ಲಿ 10 ಲಕ್ಷ ಸಾಲ. ಸಣ್ಣ ವ್ಯಾಪಾರಿಗಳಿಗೆ ಮತ್ತು ಅಂಗಡಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು 1 ಸಾವಿರ ಕೋಟಿ ರೂ ಕಲ್ಯಾಣ ನಿಧಿ ಸ್ಥಾಪನೆ, ಸ್ವಯಂ ಉದ್ಯೋಗದಲ್ಲಿ ತೊಡಗುವ ಸಣ್ಣ ಹೋಟೆಲ್/ ಬೇಕರಿ/ಸಿಹಿ ತಿನಿಸು ಮಳಿಗೆ ಸ್ಥಾಪನೆ ಮಾಡುವವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ.

ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ದಾದಿಯರು, ಅಂಗನವಾಡಿ, ಆಶಾ ಕಾರ್ಯಕರ್ತರಿಗೆ ಶೇ 50ರಷ್ಟು ಎಲೆಕ್ಟ್ರಿಕ್ ವಾಹನ ಕೊಂಡುಕೊಳ್ಳಲು ಸಹಾಯ ಧನ, ಪತ್ರಕರ್ತರ ಕಲ್ಯಾಣ ನಿಧಿ ಸ್ಥಾಪನೆಗೆ 500 ಕೋಟಿ ಮೀಸಲು, ವಕೀಲರ ಸಂರಕ್ಷಣಾ ಕಾಯ್ದೆ ಜಾರಿ.

1 ವರ್ಷದಲ್ಲಿ ಸರ್ಕಾರದ 2.5 ಲಕ್ಷ ಹುದ್ದೆಗಳ ಭರ್ತಿ, ಭಾಷೆ, ಸಾಹಿತ್ಯ, ಸಂಪ್ರದಾಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಜಾರಿ ಮಾಡುವುದಾಗಿ ಹೇಳಿದರು.

ರಾಜ್ಯದ ಎಲ್ಲ ದೇವಸ್ಥಾನ ಮಠಗಳ ನವೀಕರಣಕ್ಕೆ 1 ಸಾವಿರ ಕೋಟಿ ಮೀಸಲು 60 ವರ್ಷ ಮೀರಿದ ಅರ್ಚಕರಿಗೆ ಮಾಸಿಕ 5 ಸಾವಿರ ಗೌರವ ಧನ, ಗ್ರಾಮ ಮಟ್ಟದಲ್ಲಿ ನಡೆಯುವ ಗ್ರಾಮದೇವತೆ ಮತ್ತು ತೇರುಗಳ ಹಬ್ಬಗಳಿಗೆ 20 ಸಾವಿರ ರೂ. ದೇಣಿಗೆ ನೀಡುವ ಭರವಸೆಯನ್ನೂ ನೀಡಿದ್ದಾರೆ.

# ಹಕ್ಕಿಪಿಕ್ಕಿ ಜನಾಂಗಕ್ಕೆ ಸೂಕ್ತ ಸೌಲಭ್ಯ ನೀಡಲು ಒತ್ತಾಯ

ದಾವಣಗೆರೆ, ಮೇ 2- ನಮ್ಮ ಸರ್ಕಾರಗಳು ರಾಜ್ಯದಲ್ಲಿ ನೆಲೆಸಿರುವ ಹಕ್ಕಿಪಿಕ್ಕಿಗಳಿಗೆ ಸೂಕ್ತ ಸೌಲಭ್ಯ ಕಲ್ಪಿಸುತ್ತಿಲ್ಲ. ಸಮುದಾಯದ ಜನರಿಗೆ ಉಳುಮೆ ಮಾಡಲು ಭೂಮಿ, ನಿವೇಶನ ಹಕ್ಕುಪತ್ರ ನೀಡುವ ಜತೆಗೆ, ನಮ್ಮ ವೃತ್ತಿಗಳಿಗೆ ಸಂಬಂಧಿಸಿದ ಪರವಾನಗಿ ನೀಡಬೇಕು ಎಂದು ಕರ್ನಾಟಕ ಹಕ್ಕಿಪಕ್ಕಿ ಬುಡಕಟ್ಟು ಸಂಘಟನೆ ರಾಜ್ಯಾಧ್ಯಕ್ಷ ಆರ್. ಪುನೀತ್‌ಕುಮಾರ್ ಮನವಿ ಮಾಡಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಡಾನ್‌ನಿಂದ ಜಿಲ್ಲೆಯ ಹಕ್ಕಿಪಿಕ್ಕಿ ಸಮುದಾಯದ ಜನರನ್ನು ಸುರಕ್ಷಿತವಾಗಿ ತವರಿಗೆ ಕರೆತಂದ ಭಾರತ ಸರ್ಕಾರ, ರಾಯಭಾರ ಕಚೇರಿ ಹಾಗೂ ಜಿಲ್ಲಾಡಳಿತಕ್ಕೆ ಧನ್ಯವಾದ ತಿಳಿಸಿದರು.

ವ್ಯಾಪಾರ ಉದ್ದೇಶದಿಂದ ದಾವಣಗೆರೆ, ಶಿವಮೊಗ್ಗ ಸೇರಿ ರಾಜ್ಯದ ನಾನಾ ಭಾಗಗಳಿಂದ ಹಕ್ಕಿಪಿಕ್ಕಿ ಸಮುದಾಯದ 800ಕ್ಕೂ ಹೆಚ್ಚು ಮಂದಿ ಸುಡಾನ್‌ಗೆ ತೆರಳಿದ್ದರು. ಆದರೆ, ಕಳೆದ 20 ದಿನಗಳಿಂದ ಸುಡಾನ್‌ನಲ್ಲಿ ಯುದ್ಧ ನಡೆಯುತ್ತಿದೆ. ಇದರಿಂದ ಎಲ್ಲರೂ ಭಯಭೀತರಾಗಿದ್ದರು. ಈಗ ನೂರಾರು ಮಂದಿ ಭಾರತಕ್ಕೆ ಸುರಕ್ಷಿತವಾಗಿ ಮರಳಿದ್ದು, ಇನ್ನೂ ಹೆಚ್ಚು ಮಂದಿ ಬರಲಿದ್ದಾರೆ ಎಂದರು.

ಸುಡಾನ್‌ನಿಂದ ಮರಳಿದ ನಂದಕುಮಾರ್ ಮಾತನಾಡಿ, ಅಲ್ಲಿ ಇದ್ದಕ್ಕಿದ್ದಂತೆ ಯುದ್ಧ ಆರಂಭವಾಯಿತು. ಮೊದಲು ವಿಮಾನ ನಿಲ್ದಾಣದ ಮೇಲೆ ಬಾಂಬ್ ದಾಳಿ ನಡೆಸಲಾಯಿತು. ಬಳಿಕ ರಾಜಧಾನಿ ಖಾರ್ತೂಮ್‌ನಲ್ಲಿ ಗಲಭೆ ಶುರುವಾಯಿತು.

20 ದಿನಗಳಲ್ಲಿ ಸಾವಿರಕ್ಕೂ ಅಧಿಕ ನಾಗರಿಕರು ಸಾವನ್ನಪ್ಪಿದರು. ದಿನಸಿ ತರಲು ಹೊರಗೆ ಹೋದ ಭಾರತೀಯರನ್ನು ಕೆಲವರು ಬೆದರಿಸಿ ಹಣ, ಮೊಬೈಲ್ ಕಸಿದುಕೊಂಡ ಘಟನೆಗಳೂ ನಡೆದವು ಎಂದು ವಿವರಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಸುಡಾನ್‌ನಿಂದ ಮರಳಿದ ಯುವಕ ಭವಾನಿ, ಬಿ. ಸಾವಂತ್, ಗೋಪನಾಳ್ ನಿವಾಸಿ ಭಾಸ್ಕರ್ ಇದ್ದರು.

# ಬಿಜೆಪಿ ಯೋಜನೆಗಳೇ ಕಾಂಗ್ರೆಸ್ ಪ್ರಣಾಳಿಕೆ: ಸಿಎಂ

ಬೆಂಗಳೂರು, ಮೇ 2 - ಬಿಜೆಪಿ ಯೋಜನೆಗಳೇ ಕಾಂಗ್ರೆಸ್‌ನ ಪ್ರಣಾಳಿಕೆ. ಕಾಂಗ್ರೆಸ್‌ನದ್ದು ದಗಾಬಾಜಿ ಪ್ರಣಾಳಿಕೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಘೋಷಣೆ ಮಾಡಿರುವ ಯೋಜನೆಗಳನ್ನೇ ಅವರು ಘೋಷಣೆ ಮಾಡಿದ್ದಾರೆ ಎಂದರು. ಇದಕ್ಕೂ ಮೊದಲು ಗ್ಯಾರಂಟಿ ಕಾರ್ಡ್ ನೀಡಿದ್ದಾರೆ. 10 ಕೆಜಿ ಅಕ್ಕಿ ಕೊಡುವುದಾಗಿ ಹೇಳಿದ್ದಾರೆ. ಕೋವಿಡ್ ನಂತರ ನಾವು ಈಗಾಗಲೇ 10 ಕೆಜಿ ಅಕ್ಕಿ ಕೊಡುತ್ತಿದ್ದೇವೆ. ಮೋದಿ ಅಕ್ಕಿಗೆ ತಮ್ಮ ಗೋಣಿ ಚೀಲ ಹಾಕಿ ಅದಕ್ಕೆ ತಮ್ಮ ಫೋಟೊ ಹಾಕಿ ಕೊಂಡಿದ್ದಾರೆ. ಮೇ 10 ರ ವರೆಗೆ ಇವರ ಗ್ಯಾರೆಂಟಿ, ಆ ಮೇಲೆ ಗಳಗಂಟಿ ಎಂದರು.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನಾವು ಈಗಾಗಲೇ ಘೋಷಣೆ ಮಾಡಿದ್ದೇವೆ. ಅದನ್ನೇ ಬೇರೆ ಹೆಸರಲ್ಲಿ ಘೋಷಣೆ ಮಾಡಿದ್ದಾರೆ. ಕಳಸಾ ಬಂಡೂರಿ ಯೋಜನೆಯನ್ನು ಐದು ವರ್ಷಗಳಲ್ಲಿ ಪೂರ್ಣಗೊಳಿಸುವುದಾಗಿ ಹೇಳಿದ್ದಾರೆ. ನಾವು ಈಗಾಗಲೇ ಟೆಂಡರ್ ಕರೆಯಲು ಸಿದ್ಧತೆ ಮಾಡಿಕೊಂಡಿದ್ದೇವೆ ಎಂದರು.

ನಾಲ್ಕು ಕಂದಾಯ ವಿಭಾಗಗಳಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ತೆರೆಯುತ್ತಿದ್ದೇವೆ. ಈಗಾಗಲೇ ನಾಲ್ಕು ಕಂದಾಯ ವಿಭಾಗಗಳಲ್ಲಿ ಜಯದೇವ ಆಸ್ಪತ್ರೆ ತೆರೆಯಲಾಗಿದೆ. ಹುಬ್ಬಳ್ಳಿ ಯಲ್ಲಿ 250 ಹಾಸಿಗೆಗಳ ಜಯದೇವ ಆಸ್ಪತ್ರೆ ಆರಂಭಿಸಲು ಕ್ರಮ ಕೈಗೊಂಡಿದ್ದೇವೆ ಎಂದರು.

# ಸಿರಿಗೆರೆಯ ಎಂ.ಬಿ.ಆರ್ ಕಾಲೇಜ್‌ಗೆ ಉತ್ತಮ ಫಲಿತಾಂಶ



ಸಿರಿಗೆರೆ, ಮೇ 2- ಇಲ್ಲಿನ ಎಂ.ಬಸವಯ್ಯ ವಸತಿ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿಯಲ್ಲಿ ಶೇ. 81.82ರಷ್ಟು ಫಲಿತಾಂಶ ಲಭಿಸಿದೆ. ಕಾಲೇಜಿನಲ್ಲಿ 132 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 108 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ 5, ವಿಜ್ಞಾನ ವಿಭಾಗ 12, ವಾಣಿಜ್ಯ ವಿಭಾಗ 13 ಸೇರಿದಂತೆ ಒಟ್ಟು 30 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕಲಾ ವಿಭಾಗದಲ್ಲಿ ಡಿ. ಸ್ನೇಹ 600 ಕ್ಕೆ 564, ವಾಣಿಜ್ಯ ವಿಭಾಗದಲ್ಲಿ ಟಿ.ವಿದ್ಯಾಶ್ರೀ 561, ವಿಜ್ಞಾನ ವಿಭಾಗದಲ್ಲಿ ಬಿ. ಎಸ್. ವೇಣು 550 ಅಂಕಗಳನ್ನು ಗಳಿಸಿದ್ದಾರೆ.

# ಕೇಂದ್ರೀಯ ವಿ.ವಿ. ನೇಮಕಕ್ಕೆ ಏಕೀಕೃತ ವೆಬ್ ತಾಣ

ನವದೆಹಲಿ, ಮೇ 2 – ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಬೋಧಕ ಸಿಬ್ಬಂದಿ ನೇಮಕಕ್ಕಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ.) ಏಕೀಕೃತ ವೆಬ್ ತಾಣವನ್ನು ಆರಂಭಿಸಿದೆ ಎಂದು ಅದರ ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದರು.

ಬಳಕೆದಾರರ ಸ್ನೇಹಿಯಾಗುವ ರೀತಿಯಲ್ಲಿ ಸಿ.ಯು.-ಚಯನ್ ಎಂಬ ವೆಬ್ ತಾಣ ಆರಂಭಿಸಲಾಗಿದೆ. ಇದು ವಿಶ್ವವಿದ್ಯಾಲಯಗಳು ಹಾಗೂ ಅರ್ಜಿದಾರರಿಬ್ಬರಿಗೂ ಸಹಾಯಕವಾಗಲಿದೆ ಎಂದವರು ತಿಳಿಸಿದರು. ದೇಶದಲ್ಲಿ 45 ಕೇಂದ್ರೀಯ ವಿಶ್ವವಿದ್ಯಾಲಯಗಳು, 23 ಐಐಟಿ ಹಾಗೂ 20 ಐಐಎಂಗಳಿವೆ.

# ಐಗೂರು ಸುತ್ತಮುತ್ತ ಇಂದು ಮಾಯಕೊಂಡ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಸವಂತಪ್ಪ ಪ್ರಚಾರ



ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್ ಬಸವಂತಪ್ಪ ಅವರು ಇಂದು ಬೃಹತ್ ಮೆರವಣಿಗೆ ಮೂಲಕ ಚುನಾವಣಾ ಪ್ರಚಾರ ನಡೆಸುವರು.

ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ ಹೊನ್ನೂರು, ಐಗೂರು ಗೊಲ್ಲರಹಟ್ಟಿ, ಐಗೂರು ಹೊಸ ಬಡಾವಣೆ, ಐಗೂರು, ತುಂಬಿಗೆರೆ, ಬೋರಗೊಂಡನಹಳ್ಳಿ, ಲಿಂಗಾಪುರ, ಆಲೂರು ಹಟ್ಟಿ, ಅಣಜಿ, ಕಿತ್ತೂರು ಗ್ರಾಮಗಳಲ್ಲಿ ಪ್ರಚಾರ ನಡಸುವರು.

# ಪಕ್ಷಗಳು, ಪ್ರಚಾರಕರು ಸಂಯಮ ಕಾಯ್ದುಕೊಳ್ಳಲು ಆಯೋಗದ ಸೂಚನೆ

ನವದೆಹಲಿ, ಮೇ 2 – ಕರ್ನಾಟಕ ವಿಧಾನಸಭಾ ಚುನಾವಣೆಯ ವೇಳೆ ರಾಜಕೀಯ ಪಕ್ಷಗಳು ಹಾಗೂ ತಾರಾ ಪ್ರಚಾರಕರು ಸಂಯಮ ಕಾಯ್ದುಕೊಳ್ಳಬೇಕು. ಚುನಾವಣಾ ವಾತಾವರಣ ವಿಷಮಗೊಳಿಸಬಾರದು ಎಂದು ಚುನಾವಣಾ ಆಯೋಗ ತಿಳಿಸಿದೆ. ಪ್ರಚಾರದ ವೇಳೆ ಚರ್ಚೆಯ ಮಟ್ಟ ಕುಸಿಯುತ್ತಿರುವುದರ ಬಗ್ಗೆ ಗಮನ ಸೆಳೆದಿರುವ ಆಯೋಗ, ಕೆಲವೊಮ್ಮೆ ಸೂಕ್ತವಲ್ಲದ ಭಾಷೆ ಬಳಸಲಾಗುತ್ತಿದೆ ಎಂದು ಹೇಳಿದೆ.

# 30 ಪರ್ಸೆಂಟ್ ಆದರೂ ಜನರ ಬಗ್ಗೆ ಮಾತನಾಡಿ: ರಾಹುಲ್

**(1ನೇ ಪುಟದಿಂದ)** ಹೇಳಿದರು. ಬಿಜೆಪಿ ಸರ್ಕಾರದ ವಿರುದ್ಧ ಕೇಳಿ ಬಂದಿರುವ ಶೇ.40 ಕಮೀಷನ್ ಬಗ್ಗೆ ಪ್ರಧಾನಿ ಮುಂದಿನ ಭಾಷಣಗಳಲ್ಲಿ ಮಾತನಾಡಲಿ. ಭ್ರಷ್ಟಾಚಾರದ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಜನರಿಗೆ ತಿಳಿಸಲಿ ಎಂದವರು ಸವಾಲು ಹಾಕಿದರು.

ಬಿಜೆಪಿ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಆದರೆ, ಕಳೆದ ಚುನಾವಣೆ ಸಂದರ್ಭದಲ್ಲಿ ನೀಡಿದ ಭರವಸೆಗಳಲ್ಲಿ ಶೇ.60ರಷ್ಟನ್ನೂ ಈಡೇರಿಸಿಲ್ಲ. ರಾಜ್ಯದಲ್ಲಿ ಪ್ರವಾಹ ಬಂದಾಗ ನೆರವಾಗಲಿಲ್ಲ. ಕರ್ನಾಟಕಕ್ಕೆ ಬರಬೇಕಾದ ತೆರಿಗೆ ಪಾಲು ಕೊಡಿಸಲಿಲ್ಲ. ಕರ್ನಾಟಕ - ಮಹಾರಾಷ್ಟ್ರ ಗಡಿಯಲ್ಲಿ ಆದ ಹಿಂಸೆಯ ಬಗ್ಗೆ ಮಾತನಾಡಿಲ್ಲ. ಕಳೆದ ಮೂರು ವರ್ಷಗಳಲ್ಲಿ ಪ್ರತಿಯೊಂದು ವಿಷಯದಲ್ಲೂ 40 ಪರ್ಸೆಂಟ್ ಕಮೀಷನ್ ನಡೆದಿರುವ ಬಗ್ಗೆ ಮಾತನಾಡಿಲ್ಲ ಎಂದು ರಾಹುಲ್ ತರಾಟೆಗೆ ತೆಗೆದುಕೊಂಡರು.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಿತ್ತು. ಆದರೆ, ಬಿಜೆಪಿ ಜನಾದೇಶದ ಕಳ್ಳತನ ಮಾಡಿತು. ಭ್ರಷ್ಟಾಚಾರದ ಹಣದಿಂದ ಶಾಸಕರನ್ನು ಸೆಳೆಯಿತು. ನಂತರ 40 ಪರ್ಸೆಂಟ್ ಸರ್ಕಾರ ನಡೆಸಿತು ಎಂದವರು ಆಕ್ರೋಶ ವ್ಯಕ್ತಪಡಿಸಿದರು.

## ದೂಡಾ ನಿವೇಶನ ನೀಡದಿರುವ ಬಗ್ಗೆ ಪ್ರಧಾನಿ ಉತ್ತರಿಸಲಿ

**ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮೂಲಕ 600 ನಿವೇಶನಗಳನ್ನು ವಿತರಿಸಲಾಗು ವುದು ಎಂದು ತಿಳಿಸಲಾಗಿತ್ತು. ಆದರೆ, ಇದುವರೆಗೂ ಭೂಮಿ ಖರೀದಿಸಿಲ್ಲ. ಈ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಉತ್ತರಿಸಬೇಕು ಎಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ. ದಾವಣಗೆರೆ ನಗರದ ಜನತೆಗೆ 24 ಗಂಟೆಗಳ ಕಾಲ ನೀರು ಒದಗಿಸುವ ಜಲಸಿರಿ ಯೋಜನೆ ಜಾರಿಗೆ ತರುವುದಾಗಿ ತಿಳಿಸಲಾಗಿತ್ತು. ಆದರೆ, ಭರವಸೆ ಈಡೇರಿಲ್ಲ. ಈ ಬಗ್ಗೆ ಪ್ರಧಾನಿ ಮಾತನಾಡಲಿ. ರೈತರಿಂದ ಬಲವಂತವಾಗಿ ಜಮೀನು ಕಸಿದಿರುವ ಬಗ್ಗೆ ಪ್ರಧಾನಿ ಮಾತನಾಡಲಿ ಎಂದು ಆಗ್ರಹಿಸಿದರು.**

ಬಿಜೆಪಿ ಸರ್ಕಾರ ಜನರಿಂದ ಹಣ ಲೂಟಿ ಮಾಡಿದೆ. ಆದರೆ, ಕಾಂಗ್ರೆಸ್ ಸರ್ಕಾರ ಜನರಿಗೆ ಹಣ ಕೊಡಲಿದೆ. ಗೃಹ ಲಕ್ಷ್ಮಿ, ಗೃಹ ಜ್ಯೋತಿ, ಅನ್ನಭಾಗ್ಯ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಹಾಗೂ ನಿರುದ್ಯೋಗ ಭತ್ಯೆಯ ಐದು ಯೋಜನೆಗಳನ್ನು ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೊದಲ ಸಂಪುಟ ಸಭೆಯಲ್ಲೇ ಜಾರಿಗೆ ತರಲಾಗುವುದು ಎಂದವರು ಭರವಸೆ ನೀಡಿದರು.

ಬಿಜೆಪಿಗೆ 40 ಅಂಕಿ ಬಹಳ ಇಷ್ಟ. ಎಲ್ಲಿ ಹೋದರೂ 40 ಅನ್ನುತ್ತಿರುತ್ತಾರೆ. ಕಾಲೇಜು ಪ್ರವೇಶ, ಸರ್ಕಾರಿ ಕೆಲಸ, ಸಬ್ ಇನ್ಸ್‌ಪೆಕ್ಟರ್ ಉದ್ಯೋಗ ಹಾಗೂ ಗುತ್ತಿಗೆ ಸೇರಿದಂತೆ ಎಲ್ಲೆಡೆ 40 ಪರ್ಸೆಂಟ್ ಕಮೀಷನ್ ಪಡೆಯುತ್ತಿದ್ದಾರೆ. ಕಳೆದ ಮೂರು ವರ್ಷ ಇದೇ 40 ಎನ್ನುತ್ತಾ ಪೀಡಿಸಿದ್ದಾರೆ. ಈ ಬಾರಿ ಜನತೆ ಬಿಜೆಪಿಗೆ 40 ಸೀಟು ಕೊಡಿ. ಕಾಂಗ್ರೆಸ್‌ಗೆ ಕನಿಷ್ಠ 150 ಸೀಟು ಕೊಡಿ ಎಂದು ರಾಹುಲ್ ಗಾಂಧಿ ಕರೆ ನೀಡಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ದೇಶದ ಜನರ ಒಳಿತಿಗಾಗಿ ರಾಹುಲ್ ಗಾಂಧಿಯವರು 4 ಸಾವಿರ ಕಿಲೋಮೀಟರ್ ಪಾದಯಾತ್ರೆ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಇಂತಹ ಗಂಡೆದೆಯ ನಾಯಕ ಬಿಜೆಪಿ ಪಕ್ಷದಲ್ಲಿ ಕಾಣಲಿಕ್ಕೆ ಸಾಧ್ಯವಿಲ್ಲ ಎಂದರು.

ವೇದಿಕೆಯ ಮೇಲೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ಪಾಂಡೆ, ಕಾಂಗ್ರೆಸ್ ಅಭ್ಯರ್ಥಿಗಳಾದ ಎಸ್.ಎಸ್. ಮಲ್ಲಿಕಾರ್ಜುನ್, ನಂದಿಗಾವಿ ಶ್ರೀನಿವಾಸ್, ಡಿ.ಜಿ. ಶಾಂತನಗೌಡ, ದೇವೇಂದ್ರಪ್ಪ, ಕೆ. ಎಸ್. ಬಸವಂತಪ್ಪ, ಮುಖಂಡರಾದ ಸಂಸದ ಚಂದ್ರಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ, ಮುಖಂಡರಾದ ಜಲಜಾನಾಯ್ಕ, ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ಶಂಕರ್ ಖಟಾವ್ಕರ್, ಎಸ್.ಎಂ. ವಸಂತ್, ಶಾಹಿನಾಭಾನು ದಾದಾಪೀರ್, ಎಂ. ಎಸ್. ಬಾಬುಲಾಲ್, ಮಾಜಿ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಕೃಷ್ಣ ಸಾ ಭೂತೆ, ಜಿಲ್ಲಾ ಯುವ ಘಟಕದ ನಿಕಿಲ್ ಕೊಂಡಜ್ಜಿ, ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ್ ಪಾಟೀಲ್, ಜಿಪಂ ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಜಿಪಂ ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಮಲೇಬೆನ್ನೂರು, ಎಂ.ಬಿ. ಅಣ್ಣಪ್ಪ, ಹಳ್ಳಳ್ಳಿ ಬಸಪ್ಪ, ಕೆ. ಜಡಿಯಪ್ಪ, ನಗರಸಭೆ ಮಾಜಿ ಸದಸ್ಯರಾದ ಬಿ.ಕೆ. ಸೈಯದ್ ರೆಹಮಾನ್, ಜಿಗಳಿ ಆನಂದಪ್ಪ, ಎಂ. ಬಿ. ಅಭಿದಾಲಿ, ಹನುಮಂತಪ್ಪ, ಕಿರಣ್ ಭೂತೆ, ಸಂತೋಷ ಮತ್ತಿತರರು ಉಪಸ್ಥಿತರಿದ್ದರು.

## 40 ಕೋಟಿ ಜನ ಬಡತನಕ್ಕೆ

ಕೇಂದ್ರದ ಬಿಜೆಪಿ ಸರ್ಕಾರದ ಅವಧಿಯಲ್ಲಿ 40 ಕೋಟಿ ಜನ ಬಡತನಕ್ಕೆ ದೂಡಲ್ಪಟ್ಟಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ಹಾಗೂ ಬೆಲೆ ಏರಿಕೆ ತೀವ್ರವಾಗಿದೆ. ಗ್ಯಾಸ್ ಸಿಲಿಂಡರ್ ಬೆಲೆ 400 ರೂ. ಇದ್ದದ್ದು 1,100 ರೂ.ಗಳಿಗೆ ಏರಿಕೆಯಾಗಿದೆ. ಅಡುಗೆ ಎಣ್ಣೆ ಬೆಲೆ 60 ರಿಂದ 200 ರೂ.ಗೆ ಏರಿದೆ. ಪೆಟ್ರೋಲ್ 70 ರೂ.ಗಳಿಂದ 110 ರೂ.ಗಳಾಗಿದೆ. ಡೀಸೆಲ್ 67 ರೂ.ಗಳಿಂದ 90 ರೂ. ಆಗಿದೆ. ಕೋಟ್ಯಂತರ ಜನ ನಿರುದ್ಯೋಗಿಗಳಾಗಿ ದ್ದಾರೆ ಎಂದವರು ಹೇಳಿದರು.


## ಪಿಹೆಚ್‌ಡಿ ಸಾಧನೆಗೆ ಅಭಿನಂದನೆಗಳು



ಅಭಿನಂದನೆಗಳು

ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ವಾಸಿ ದಿವಂಗತ ರಾಟಿ ಹನುಮಂತಪ್ಪ ಹಾಗೂ ದಿವಂಗತ ನೇಮಮ್ಮನವರ ಮೊಮ್ಮಗಳು ಮತ್ತು ಶ್ರೀಮತಿ ರೇಣುಕಮ್ಮ, ಶ್ರೀ ರಾಟಿ ಹನುಮಂತಪ್ಪನವರ ಪುತ್ರಿ ಬೆಂಗಳೂರು ಪಿ.ಇ.ಎಸ್. ಕಾಲೇಜಿನ ಕಂಪ್ಯೂಟರ್ ಮತ್ತು ಇನ್ ಫಾರ್ಮೇಷನ್ ಸೈನ್ಸಸ್‌ನ ಉಪನ್ಯಾಸಕಿ

**ಪ್ರಿಯಾಂಕ.ಹೆಚ್** ಇವರು

**`Managing The Resource Of Virtual Machine Using Migration Technique Within The Cloud Environment'**

ಎಂಬ ವಿಷಯದ ಮೇಲೆ ಮಂಡಿಸಿದ ಮಹಾಪ್ರಬಂಧಕ್ಕೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಹೆಚ್‌ಡಿ ಪದವಿ ನೀಡಿ ಗೌರವಿಸಿದೆ. ಇವರ ಸಾಧನೆಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಭವಿಷ್ಯ ಉಜ್ವಲವಾಗಿರಲೆಂದು ಶುಭ ಹಾರೈಸುತ್ತೇವೆ.

- ಶ್ರೀಮತಿ ರೇಣುಕ ಮತ್ತು ಶ್ರೀ ಹನುಮಂತಪ್ಪ ರಾಟಿ
- ಶ್ರೀಮತಿ ಉಷಾ ಮತ್ತು ಶ್ರೀ ಚಂದ್ರಶೇಖರ್ ರಾಟಿ
- ಶ್ರೀಮತಿ ಮಂಜುಳ ಮತ್ತು ಶ್ರೀ ಸಂಪತ್ ಕುಮಾರ್ ರಾಟಿ
- ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ಧರ್ಮೇಂದ್ರಕುಮಾರ್ ರಾಟಿ
- ಶ್ರೀಮತಿ ನಾಗವೇಣಿ ಮತ್ತು ಶ್ರೀ ಅರುಣ್ ವೆಂಕಟ್ ರಾಟಿ
- ಶ್ರೀಮತಿ ಹನುಮಕ್ಕ ದಿವಂಗತ ಶ್ರೀ ಗುಡ್ಡಪ್ಪ
- ಶ್ರೀಮತಿ ಬಸಮ್ಮ ಮತ್ತು ಶ್ರೀ ಭೀಮನಗೌಡ ಪಾಟೀಲ್
- ಶ್ರೀಮತಿ ರೇಣುಕ ಮತ್ತು ಶ್ರೀ ರಮೇಶ್ ಜೇಡರ್
- ಶ್ರೀಮತಿ ಭಾಗೀರಥಿ ಮತ್ತು ಶ್ರೀ ಸೋಮಲಿಂಗಪ್ಪ ಕಾಳಪ್ಪನವರ್
- ಶ್ರೀಮತಿ ಸುನೀತ ದಿವಂಗತ ಶ್ರೀ ಹನುಮಂತಪ್ಪ ಬಾರ್ಕಿ

# ಡಿಕೆಶಿ ಹೆಲಿಕಾಪ್ಟರ್‌ಗೆ ಬಡಿದ ಹದ್ದು

## ಹೆಲಿಕಾಪ್ಟರ್ ತುರ್ತು ಭೂಸ್ಪರ್ಷ, ಎಲ್ಲರೂ ಅಪಾಯದಿಂದ ಪಾರು



ಬೆಂಗಳೂರು, ಮೇ 2 - ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕೋಲಾರಕ್ಕೆ ತೆರಳುತ್ತಿದ್ದ ಹೆಲಿ ಕಾಪ್ಟರ್ ಗೆ ಹದ್ದು ಡಿಕ್ಕಿ ಹೊಡೆದ ಪರಿಣಾಮ ತುರ್ತು ಭೂ ಸ್ಪರ್ಶ ಮಾಡಲಾಗಿದೆ. ಹೆಲಿಕಾಪ್ಟರ್ ನಲ್ಲಿ ಇದ್ದ ಎಲ್ಲರೂ ಪ್ರಾಣಾಪಾಯದಿಂದ ಪಾರಾ ಗಿದ್ದು, ಪೈಲಟ್ ಜಾಗರೂಕತೆಯಿಂದ ಭಾರೀ ಅವಘಡ ತಪ್ಪಿದೆ.

ಶಿವಕುಮಾರ್ ಅವರು ಮುಳಬಾಗಿಲಿನಲ್ಲಿ ಚುನಾವಣೆ ಪ್ರಚಾರ ಕಾರ್ಯಕ್ರಮಕ್ಕೆ ಮಂಗಳವಾರ ಮಧ್ಯಾಹ್ನ 12.10ರ ಸುಮಾರಿಗೆ ಜಕ್ಕೂರು ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ನಲ್ಲಿ ಪ್ರಯಾಣ ಮಾಡಿದ್ದು, ಹೊಸಕೋಟೆ ಸಮೀಪ ಹದ್ದು ಡಿಕ್ಕಿ ಹೊಡೆದ ಪರಿಣಾಮ ಹೆಲಿಕಾಪ್ಟರ್ ಗಾಜು ಒಡೆದಿದೆ. ಈ ಸಂದರ್ಭದಲ್ಲಿ ಪೈಲಟ್ ಸಮಯ ಪ್ರಜ್ಞೆ ಮೆರೆದಿದ್ದು, ಹೆಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿ ಹೆಲಿಕಾಪ್ಟರ್ ಅನ್ನು ತುರ್ತು ಭೂ ಸ್ಪರ್ಶ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿರುವ ಶಿವಕುಮಾರ್ ಅವರು, ನಾನು ನಂಬಿರುವ ಶಕ್ತಿ ಹಾಗೂ ದೇವರು ನನ್ನ ಜತೆಗಿದ್ದು, ನನ್ನನ್ನು ಕಾಪಾಡಿದ್ದಾರೆ. ನಮ್ಮ ಹೆಲಿಕಾಪ್ಟರ್ ಟೇಕಾಫ್ ಆಗಿ 7-8 ನಿಮಿಷ ಕಳೆದಿತ್ತು. ನಾವು ಹೊಸಕೋಟೆ ಹತ್ತಿರ ತಲುಪಿದಾಗ ದೊಡ್ಡ ಹದ್ದು ಬಂದು ಡಿಕ್ಕಿ ಹೊಡೆಯಿತು ಎಂದರು.

ಮಾಧ್ಯಮದವರು ಪಕ್ಷದ ಪ್ರಣಾಳಿಕೆ ಕುರಿತು ಸಂದರ್ಶನ ಮಾಡುತ್ತಿದ್ದಾಗ ಈ ಘಟನೆ ನಡೆದಿದೆ. ಈ ಸಂದರ್ಭದಲ್ಲಿ ಪೈಲಟ್ ಹೆಲಿಕಾಪ್ಟರ್ ಹಾರಾಟದ ಎತ್ತರವನ್ನು ಕಡಿಮೆ ಮಾಡಿ ನಮ್ಮನ್ನು ರಕ್ಷಿಸಿದ್ದಾರೆ. ಈಗ ಬೇರೆ ಹೆಲಿಕಾಪ್ಟರ್ ಸಿಗದ ಕಾರಣ, ರಸ್ತೆ ಮಾರ್ಗವಾಗಿ ಮುಳಬಾಗಿಲಿಗೆ ತೆರಳುತ್ತಿದ್ದೇವೆ ಎಂದು ಹೇಳಿದರು.

ಇದು ಆಕಸ್ಮಿಕವಾಗಿ ಆಗಿರುವ ಘಟನೆ, ಯಾವುದೇ ಅಪಾಯವಿಲ್ಲದೇ ಸುರಕ್ಷಿತವಾಗಿ ಭೂಸ್ಪರ್ಶವಾಗಿದೆ. ಪ್ರಯಾಣದ ವೇಳೆ ಮೂರು ಹದ್ದುಗಳು ಎದುರಾಗಿದ್ದು, ಪೈಲಟ್ ಎರಡು ಹದ್ದುಗಳನ್ನು ದಾಟಿದ್ದರು. ಮೂರನೇ ಹದ್ದು ಕೆಳಗಡೆಯಿಂದ ಮೇಲೆ ಬಂದು ಡಿಕ್ಕಿ ಹೊಡೆಯಿತು. ಯಾರೂ ಇದರಿಂದ ಗಾಬರಿಯಾ ಗುವುದು ಬೇಡ, ಇದೊಂದು ಆಕಸ್ಮಿಕ, ಇದನ್ನು ಇಲ್ಲಿಗೆ ಬಿಟ್ಟು ಮುಂದೆ ಸಾಗೋಣ ಎಂದು ತಿಳಿಸಿದರು.

# ರಾಣೇಬೆನ್ನೂರಿನ ಆರ್‌ಟಿಇಎಸ್ ಕಾಲೇಜಿಗೆ ಶೇ. 98 ಫಲಿತಾಂಶ

ರಾಣೆಬೆನ್ನೂರು, ಮೇ 2 - ನಗರದ ಆರ್.ಟಿ.ಇ.ಎಸ್. ಪದವಿಪೂರ್ವ ಮಹಾವಿದ್ಯಾಲಯದ 2022 23ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದ ಒಟ್ಟು ಫಲಿತಾಂಶ ಶೇಕಡ 98 % ಕಾಲೇಜಿನ ಒಟ್ಟು 300 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅದರಲ್ಲಿ 49 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 153 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 41 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ, 28 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಕಲಾ ವಿಭಾಗದ ಕುಮಾರ್ ಗುಳೇದ ರವಿ 555 ಅಂಕಗಳೊಂದಿಗೆ 92.50% ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ವಾಣಿಜ್ಯ ವಿಭಾಗದಲ್ಲಿ ಕುಮಾರಿ ಮಂಜುಳಾ ಎಸ್. ಸರವಂದ 568 ಅಂಕ 94.67% ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ.

ವಿಜ್ಞಾನ ವಿಭಾಗದಲ್ಲಿ ಕುಮಾರಿ ರಕ್ಷಿತಾ ಎ. ನಾಡಿಗೇರ ಇವರು ಭೌತ ಶಾಸ್ತ್ರ 97, ರಸಾಯನಶಾಸ್ತ್ರ 99, ಗಣಿತ ಶಾಸ್ತ್ರ 98, ಜೀವಶಾಸ್ತ್ರ 99 ಒಟ್ಟು PC MB 98.25%, ಒಟ್ಟು 578 ಅಂಕಗಳನ್ನು ಪಡೆದು PCMB ಸಂಯೋ ಜನೆಯಲ್ಲಿ ರಾಣೇಬೆನ್ನೂರು ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿರುವುದಲ್ಲದೇ, ಹಾವೇರಿ ಜಿಲ್ಲೆಗೆ ತೃತೀಯ ಸ್ಥಾನ ಪಡೆದಿರುತ್ತಾರೆ. ಎಲ್ಲಾ ವಿದ್ಯಾರ್ಥಿಗಳಿಗೆ ಆರ್.ಟಿ.ಇ.ಎಸ್ ಸಂಸ್ಥೆಯ ಅಧ್ಯಕ್ಷ ಸುಭಾಷ್ ವಿ.ಸಾಹುಕಾರ, ಶ್ರೀಮತಿ ಎನ್ .ಕೆ ಕೋಟಿ ಕಾರ್ಯದರ್ಶಿಗಳು ಹಾಗೂ ಪ್ರಾಚಾರ್ಯ ಪಿ.ಬಿ.ಖಟಾವಕರ್ ಶುಭ ಕೋರಿದರು.

# ಷಷ್ಠ್ಯಬ್ದಿಪೂರ್ತಿ ಸಂಭ್ರಮದಲ್ಲಿ ಬನ್ನಯ್ಯ-ಸುಧಾರಾಣಿ ದಂಪತಿ



'ಸತಿ-ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬಂತೆ ಧಾರ್ಮಿಕ ಕ್ಷೇತ್ರದಲ್ಲಿ ದಾವಣಗೆರೆಯ ಶ್ರೀ ಶೈಲ ಮಠದ ವ್ಯವಸ್ಥಾಪಕ ಬನ್ನಯ್ಯ ಸ್ವಾಮಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವರ ಪತ್ನಿ ನಿವೃತ್ತ ಶಿಕ್ಷಕಿ ಶ್ರೀಮತಿ ಸುಧಾರಾಣಿ ದಂಪತಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ.

ಬನ್ನಯ್ಯ ಸ್ವಾಮಿ ಮತ್ತು ಸುಧಾರಾಣಿ ದಂಪತಿಯ ಷಷ್ಠ್ಯಬ್ದಿಪೂರ್ತಿ ಸಮಾರಂಭವು ಶ್ರೀ ಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಮಹಾಸ್ವಾಮಿಗಳ ಇಷ್ಟಲಿಂಗ ಪೂಜೆಯೊಂದಿಗೆ ಅವರ ನಿವಾಸದಲ್ಲಿ ಇಂದು ಬೆಳಿಗ್ಗೆ ನಡೆಯಲಿದೆ.

1980ರಿಂದ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರದ ಅರ್ಚಕರಾಗಿ ನಂತರ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಶೈಲ ಪೀಠದ ಮೂವರು ಜಗದ್ಗುರುಗಳ ಸೇವೆ ಮಾಡುತ್ತಾ, ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ವಿಶ್ವ ವೀರಶೈವ - ಲಿಂಗಾಯತ ಏಕೀಕರಣ ಪರಿಷತ್ ಸ್ಥಾಪನೆಗೆ ಪರಿಶ್ರಮಪಟ್ಟಿದ್ದಾರೆ. ದಾವಣಗೆರೆ ಜಿಲ್ಲಾ ಅರ್ಚಕರ-ಪುರೋಹಿತರ ಸಂಘದ ಅಧ್ಯಕ್ಷರಾಗಿದ್ದಾರೆ. ಬಂಕಾಪುರ ನಂಜುಂಡಪ್ಪ ಹಿರಿಯ ಪ್ರಾಥಮಿಕ ಶಾಲೆಯ ಖಜಾಂಚಿಯಾಗಿಯೂ ಆಗಿದ್ದಾರೆ.

ಈಚೆಗೆ ಶ್ರೀ ಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಮಹಾಸ್ವಾಮಿಗಳ ದ್ವಾದಶ ಪೀಠಾರೋಹಣದ ಅಂಗವಾಗಿ ನಡೆದ ಬೃಹತ್ ಪಾದಯಾತ್ರೆ ಮತ್ತಿತರೆ ಕಾರ್ಯಕ್ರಮಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಇವರಿಗೆ 'ಪುರೋಹಿತ ರತ್ನ' ಸೇರಿದಂತೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಅನೇಕ ಸಂಘ - ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ.

1984ರಲ್ಲಿ ಬನ್ನಯ್ಯ ಸ್ವಾಮಿಗಳನ್ನು ವಿವಾಹವಾದ ಸುಧಾರಾಣಿಯವರು ಶ್ರೀ ಬಂಕಾಪುರದ ನಂಜುಂಡಪ್ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ, ಈಚೆಗೆ ವಯೋ ಸಹಜ ನಿವೃತ್ತಿಯಾಗಿದ್ದಾರೆ.

ಲಿಂಗೈಕ್ಯ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಮಹಾಸ್ವಾಮಿಗಳು ತಮಗೆ ಶಾಲೆಯ ಶಿಕ್ಷಕಿಯಾಗುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದನ್ನು ಸ್ಮರಿಸುತ್ತಾರೆ.

ಈ ದಂಪತಿ ಮಗಳು ಲಿಂ. ಬಿ. ಅಶ್ವಿನಿ ಸ್ಮರಣೆಗಾಗಿ ಬಡ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ನೋಟ್ ಬುಕ್, ಪೆನ್ನು ಮುಂತಾದ ಸಾಮಗ್ರಿಗಳನ್ನು ವಿತರಿಸುತ್ತಿದ್ದಾರೆ. ಇನ್ನೊಬ್ಬ ಮಗಳು ಮಲ್ಲಿಕಾ ಮತ್ತು ಅಳಿಯ ಮಂಜುನಾಥ ಹಿರೇಮಠ ಹಾಗೂ ಮೊಮ್ಮಗ ಮಂಥನ್ ಸಾರ್ಥಕ ಕಾರ್ಯಕ್ರಮಕ್ಕೆ ಕೈ ಜೋಡಿಸಿದ್ದಾರೆ.

- ಬಕ್ಕೇಶ ನಾಗನೂರು,
ಹಿರಿಯ ಪತ್ರಕರ್ತರು.

# ದ್ವೇಷ ಭಾಷಣ : ಅಮಿತ್ ಷಾ, ನಡ್ಡಾ, ಯೋಗಿ ವಿರುದ್ಧ ಕಾಂಗ್ರೆಸ್ ದೂರು

ನವದೆಹಲಿ, ಮೇ 2 – ಕರ್ನಾಟಕ ವಿಧಾನಸಭಾ ಪ್ರಚಾರದ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ದ್ವೇಷ ಭಾಷಣ ಮಾಡಿದ್ದಾರೆ. ಇವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಒತ್ತಾಯಿಸಿದೆ.

ಕಾಂಗ್ರೆಸ್ ನಾಯಕರಾದ ಅಜಯ್ ಮಾಕೆನ್, ವಿವೇಕ್ ಟಂಖ, ಸಲ್ಮಾನ್ ಖುರ್ಷಿದ್ ಹಾಗೂ ಪವನ್ ಖೇರ ಅವರನ್ನು ಒಳಗೊಂಡ ಕಾಂಗ್ರೆಸ್ ನಿಯೋಗ ಚುನಾವಣಾ ಆಯೋಗವನ್ನು ಭೇಟಿ ಮಾಡಿ ಈ ಬಗ್ಗೆ ಮನವಿ ಸಲ್ಲಿಸಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದಲ್ಲಿ ಗಲಭೆಗಳಾಗುತ್ತವೆ ಎಂದು ಗೃಹ ಸಚಿವರು ಚುನಾವಣಾ ಭಾಷಣ ಮಾಡುವಾಗ ಹೇಳಿದ್ದಾರೆ. ದೇಶದಲ್ಲಿ ಧೃವೀಕರಣವಾಗುವ ಹಾಗೂ ಸಮಾಜದಲ್ಲಿ ಒಡಕು ತರುವ ಹೇಳಿಕೆ ನೀಡಿದ್ದಾರೆ.

ಉನ್ನತ ಹುದ್ದೆ ಹೊಂದಿರುವವರು ಈ ರೀತಿಯ ಹೇಳಿಕೆ ನೀಡಲು ಸಂವಿಧಾನದಲ್ಲಿ ಅವಕಾಶವಿಲ್ಲ. ಈ ಬಗ್ಗೆ ಚುನಾವಣಾ ಆಯೋಗದ ಗಮನ ಸೆಳೆದಿದ್ದೇವೆ ಎಂದು ಟಂಖ ಹೇಳಿದರು.

ದ್ವೇಷ ಭಾಷಣ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

ನೆಲದ ಕಾನೂನು ಹಾಗೂ ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಆಯೋಗ ಕ್ರಮ ತೆಗೆದುಕೊಳ್ಳಬೇಕು ಎಂದವರು ಒತ್ತಾಯಿಸಿದರು.

# ನೂತನ ಎಸ್ಪಿ ಡಾ. ಅರುಣ್‌ರನ್ನು ಅಭಿನಂದಿಸಿದ ಬಿ.ಎಸ್.ಸಿ. ಗ್ರೂಪ್



ದಾವಣಗೆರೆ, ಏ. 2- ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಜಿಲ್ಲೆಗೆ ಆಗಮಿಸಿರುವ ಡಾ. ಅರುಣ್ ಅವರನ್ನು ನಗರದ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಬಟ್ಟೆ ಅಂಗಡಿ ಮಾಲೀಕ ಬಿ.ಎಸ್. ಮೈನಾಲ್ ಅಭಿನಂದಿಸಿದರು.

# ಕಾಂಗ್ರೆಸ್ ಅಭ್ಯರ್ಥಿ ಬಸವಂತಪ್ಪ ಪ್ರಚಾರ



ಮಾಯಕೊಂಡ, ಮೇ 2- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್.ಬಸವಂತಪ್ಪ ಅವರು ಕಾರಿಗನೂರು, ಹರೋಸಾಗರ, ಸಾಗರಪೇಟೆ ಹಾಗೂ ಅಕ್ಕಪಕ್ಕದ ಗ್ರಾಮಗಳಲ್ಲಿ ಬಿರುಸಿನ ಚುನಾವಣಾ ಪ್ರಚಾರ ನಡೆಸಿದರು.

# ಎಸ್‌ಯುಸಿಐ ಪಕ್ಷದ ಅಭ್ಯರ್ಥಿ ಪರ ಬಹಿರಂಗ ಸಭೆ




ದಾವಣಗೆರೆ, ಮೇ 2- ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಕಾಂ. ಭಾರತಿ ಅವರ ಪರ ಬಹಿರಂಗ ಸಭೆಯನ್ನು ನಗರದ ಅಖ್ತರ್ ರಜಾ ಸರ್ಕಲ್ ನಲ್ಲಿ ನಿನ್ನೆ ಹಮ್ಮಿಕೊಳ್ಳಲಾಗಿತ್ತು.

ಸಭೆಯ ಮುಖ್ಯ ಭಾಷಣಕಾರರಾಗಿ ರಾಜ್ಯ ಸಮಿತಿ ಸದಸ್ಯರಾದ ಕಾಂ. ಬಿ.ಆರ್. ಅಪರ್ಣಾ ಮಾತನಾಡಿದರು.

ರಾಜ್ಯದ ವಿವಿಧ ರಾಜಕೀಯ ಪಕ್ಷಗಳ ಯಾತ್ರೆಗಳು, ದೊಡ್ಡ ದೊಡ್ಡ ಸಮಾವೇಶಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ನಾಯಕರು ಪುಂಖಾನುಪುಂಖವಾಗಿ ಭಾಷಣಗಳನ್ನು ಮಾಡುತ್ತಾ, ಜನರನ್ನು ಓಲೈಸಿಕೊಳ್ಳುವ ಪ್ರಯತ್ನ ಮಾಡುತ್ತಿವೆ. ಆದರೆ ಈ ಎಲ್ಲಾ ಭಾಷಣಗಳಲ್ಲಿ ಯಾವ ಪಕ್ಷದ ನಾಯಕರೂ ಕೂಡ ಜನರ ಜ್ವಲಂತ ಸಮಸ್ಯೆಗಳಾದ ಬಡತನ, ಅಪೌಷ್ಟಿಕತೆ, ಮಹಿಳೆಯರ ಮೇಲಿನ ದೌರ್ಜನ್ಯ, ಶಿಕ್ಷಣ-ಆರೋಗ್ಯದ ವ್ಯಾಪಾರೀಕರಣ, ರೈತ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮಾತನಾಡುವುದು ಬಿಟ್ಟು, ಜಾತಿ-ಧರ್ಮಗಳ ರಿಸರ್ವೇಷನ್ ಬಗ್ಗೆ ಮಾತನಾಡುತ್ತಾ ಕೋಮುವಾದದ ವಿಷ ಬೀಜವನ್ನು ಬಿತ್ತುತ್ತಿವೆ. ಈ ಎಲ್ಲಾ ಪಕ್ಷಗಳು ಜನರ ಸಮಸ್ಯೆಗಳನ್ನು ಕಡೆಗಣಿಸಿ, ಹೋರಾಟಗಳನ್ನು ಹತ್ತಿಕ್ಕುತ್ತಾ ಬಂಡವಾಳಶಾಹಿ ಪರ ನೀತಿಗಳನ್ನು ತರುತ್ತಾರೆ. ಆದ್ದರಿಂದ ಜನರ ಸಮಸ್ಯೆಗಳಿಗೆ ಪರಿಹಾರ ನೀಡುವ ಏಕೈಕ ಹೋರಾಟ ಪಕ್ಷವಾದ ಎಸ್ ಯುಸಿಐ ಕಮ್ಯುನಿಸ್ಟ್ ಪಕ್ಷವನ್ನು ಬೆಂಬಲಿಸಬೇಕು ಎಂದು ಕರೆ ನೀಡಿದರು.

ಪ್ರಾಸ್ತಾವಿಕವಾಗಿ ಜಿಲ್ಲಾ ಸಮಿತಿ ಸದಸ್ಯ ಟಿವಿಎಸ್ ರಾಜು ಅವರು ಇವತ್ತಿನ ದಿನಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಬಳಿ ಜನಸೇವೆ ಹೆಸರಲ್ಲಿ ಮತ ಕೇಳಲು ಬರುತ್ತಿವೆ. ಅವರೆಲ್ಲರೂ ರಸ್ತೆ, ಚರಂಡಿ, ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸುವುದೇ ಅಭಿವೃದ್ಧಿ ಎಂದು ಬಿಂಬಿಸುತ್ತಿದ್ದಾರೆ. ಆದರೆ ನಾವು-ನೀವೆಲ್ಲರೂ ಕೇಳಬೇಕಾಗಿರುವುದು ನಿರುದ್ಯೋಗ, ಬೆಲೆ ಏರಿಕೆ, ವಿದ್ಯುತ್, ಕುಡಿಯುವ ನೀರು, ಶಿಕ್ಷಣದ ಖಾಸಗೀಕರಣದ ನೀತಿಗಳ ಬಗ್ಗೆ ಅವರ ಧೋರಣೆಗಳನ್ನು ಪ್ರಶ್ನೆ ಮಾಡಬೇಕು. ಎಂದು ಕರೆ ನೀಡಿದರು.

ಪಕ್ಷದ ಅಭ್ಯರ್ಥಿ ಭಾರತಿ ಅವರು ಚುನಾವಣಾ ಸಂದರ್ಭದಲ್ಲಿ ಎಲ್ಲಾ ಪಕ್ಷಗಳು ತಮ್ಮ ತಮ್ಮ ಪ್ರಣಾಳಿಕೆಗಳನ್ನು ಜನರ ಮುಂದಿಡುತ್ತಾರೆ. ಅಧಿಕಾರಕ್ಕೆ ಬಂದಾಗ ಅವರ ಆಶ್ವಾಸನೆಗಳನ್ನು ಗಾಳಿಗೆ ತೂರಿ ಶ್ರೀಮಂತರು, ಬಂಡವಾಳ ಶಾಹಿಗಳ ಪರವಾದ ನೀತಿಗಳನ್ನು ತರುತ್ತಾರೆ. ಹಾಗಾಗಿ ಜನರು ರಾಜಕೀಯ ಪ್ರಜ್ಞಾವಂತಿಕೆಯಿಂದ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ವಿಚಾರಗಳನ್ನು ಅರ್ಥ ಮಾಡಿಕೊಂಡು ಗ್ಯಾಸ್ ಸಿಲಿಂಡರ್ ಗುರುತಿಗೆ ಮತ ಹಾಕಿ, ಹಾಕಿಸಿ ಎಂದು ಹೇಳಿದರು.

ಪಕ್ಷದ ಕಾರ್ಯಕರ್ತರು ಘೋಷಣೆಗಳು ಮತ್ತು ಕ್ರಾಂತಿಕಾರಿ ಗೀತೆಗಳನ್ನು ಹಾಡಿದರು. ಮಂಜುನಾಥ್ ಕೈದಾಳೆ ಅಧ್ಯಕ್ಷತೆ ವಹಿಸಿದ್ದರು. ಮಂಜುನಾಥ್ ಕುಕ್ಕುವಾಡ, ತಿಪ್ಪೇಸ್ವಾಮಿ ಅಣಬೇರು, ಮಧು ತೊಗಲೇರಿ, ರಾಘವೇಂದ್ರ ನಾಯಕ, ಡಾ. ವಸುಧೇಂದ್ರ, ಪರಶುರಾಮ್, ನಾಗಜ್ಯೋತಿ, ಸ್ಮಿತಾ, ಪೂಜಾ, ಕಾವ್ಯ, ಮಮತಾ, ಮಂಜುನಾಥ್ ರೆಡ್ಡಿ, ಹರಿಪ್ರಸಾದ್ ಮತ್ತಿತರರು ಭಾಗವಹಿಸಿದ್ದರು.

# ಭಜರಂಗ ದಳ ನಿಷೇಧಿಸುವುದಾಗಿ ಹೇಳಿದ ಕಾಂಗ್ರೆಸ್ ವಿರುದ್ಧ ದೂರು

ನವದೆಹಲಿ, ಮೇ 2 – ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಲ್ಲಿ ಭಜರಂಗ ದಳ ನಿಷೇಧಿಸುವುದಾಗಿ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ತಿಳಿಸಿರುವ ಮತ್ತು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ನಾಯಕ ಪ್ರಿಯಾಂಕ್ ಖರ್ಗೆ 'ನಾಲಾಯಕ್' ಎಂದಿರುವ ಬಗ್ಗೆ ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ಸಲ್ಲಿಸಿದೆ.

ಕೇಂದ್ರ ಸಚಿವ ಪಿಯೂಶ್ ಗೋಯಲ್ ನೇತೃತ್ವದ ಬಿಜೆಪಿ ನಿಯೋಗ ಚುನಾವಣಾ ಆಯೋಗ ಭೇಟಿ ಮಾಡಿ ದೂರು ದಾಖಲಿಸಿದೆ.

ವಿಶ್ವ ಹಿಂದೂ ಪರಿಷತ್‌ನ ಯುವ ವಿಭಾಗವಾದ ಭಜರಂಗ ದಳ ಹನುಮಂತ ದೇವರ ಆರಾಧನೆ ಹಾಗೂ ಜನರ ಸೇವೆಯಲ್ಲಿ ತೊಡಗಿದೆ. ಇದರ ವಿರುದ್ಧ ಕಾಂಗ್ರೆಸ್ ದಾಳಿ ನಡೆಸಿರುವುದು ನಾಚಿಕೆಗೇಡು ಎಂದು ಗೋಯಲ್ ಹೇಳಿದ್ದಾರೆ.

ಕಾಂಗ್ರೆಸ್ ನಾಯಕರು ಆಡಿರುವ ಎಲ್ಲಾ ಆಕ್ಷೇಪಾರ್ಹ ಮಾತುಗಳ ಬಗ್ಗೆ ಚುನಾವಣಾ ಆಯೋಗಕ್ಕೆ ತಿಳಿಸಲಾಗಿದೆ ಎಂದೂ ಅವರು ಹೇಳಿದರು.

# ಬಿಜೆಪಿಗೆ ಟಿ.ಮುಕುಂದ ರಾಜೀನಾಮೆ



ಮಲೇಬೆನ್ನೂರು ಮೇ 2- ಜಿ.ಪಂ ಮಾಜಿ ಉಪಾಧ್ಯಕ್ಷ ಟಿ.ಮುಕುಂದ ಅವರು ಮಂಗಳವಾರ ಬೆಳಗ್ಗೆ ಬಿಜೆಪಿ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಅವರಿಗೆ ರಾಜೀನಾಮೆ ಪತ್ರ ನೀಡಿದ್ದಾರೆ.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಶ್ರೀಮತಿ ಸುಮಿತ್ರದೇವಿ ಚಿರಾಣಿಯ, ಶ್ರೀ ಶಾಮ್‌ಸುಂದರ್ ಚಿರಾಣಿಯ ಮತ್ತು ಕುಟುಂಬ ವರ್ಗದವರ ಸೇವಾರ್ಥ, ಬಳ್ಳಾರಿ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆ ಬಾಡಿಗೆ/ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೆಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ಮನೆ ಬಾಡಿಗೆಗೆ ಅಥವಾ ಭೋಗ್ಯಕ್ಕಿದೆ.
98440 65710

**ಮನೆಗಳು ಮಾರಾಟಕ್ಕಿದೆ**
ಸರಸ್ವತಿ ಬಡಾವಣೆ (ನಿಂಚನ ಸ್ಕೂಲ್ ಹತ್ತಿರ) ಉತ್ತರ 22x80, (4 ಮಹಡಿ, 60,000 ಬಾಡಿಗೆ ಬರುತ್ತದೆ.) ಡಿಸಿಎಂ ಲೆಔಟ್ (Quaterz) ಸಿಮೆಂಟ್ ರಸ್ತೆ, ಪೂರ್ವ-ದಕ್ಷಿಣ ಕಾರ್ನರ್ 45x60 30,000 ಬಾಡಿಗೆ ಬರುತ್ತದೆ.
ಐಗೂರು ವಿಜಯಕುಮಾರ್
99457 02495

**ತಕ್ಷಣ ಬೇಕಾಗಿದ್ದಾರೆ**
ಡಿಟಿಡಿಸಿ ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗಿಯರು (Ladies) ಬೇಕಾಗಿದ್ದಾರೆ. ಸಂಜೆ 5 ರಿಂದ ರಾತ್ರಿ 10.30ರವರೆಗೆ Part time ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಮೊ.97385-23711

**ಮನೆ ಬಾಡಿಗೆಗಿದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 9ನೇ ಕ್ರಾಸ್‌ನಲ್ಲಿ ಡೋರ್ ನಂ. 144 ನಂಬರಿನ ಮನೆಯ ಒಂದನೇ ಮಹಡಿಯಲ್ಲಿ ನೀರಿನ ಸೌಕರ್ಯ ಇರುವ 3 ಬೆಡ್ ರೂಂ ಮನೆ ಬಾಡಿಗೆಗಿದೆ. ಸಂಪರ್ಕಿಸಿ
94480-47506

**ಮನೆಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆ ಪೂರ್ವ 40x65 (ಡುಪ್ಲೆಕ್ಸ್) (ಹೈಟೆಕ್ ಫರ್ನಿಷಿಂಗ್) ಉತ್ತರ 30x50 (ಮೇಲೆ ಸಿಂಗಲ್ ಅಟ್ಯಾಚ್), ಸಿದ್ದವೀರಪ್ಪ ಬಡಾವಣೆ ಪೂರ್ವ 30x46 ಎಂ.ಸಿ.ಸಿ. 'ಬಿ' ಬ್ಲಾಕ್ ಪೂರ್ವ 44x60 (Triplex)
ಐಗೂರು ವಿಜಯಕುಮಾರ್
99457 02495

**EC / ಇಸಿ,**
E-swathu, Khatha Change Building Licence & Other Property Documents
96118-66449

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆ 30x50, 40x50, ಎಸ್.ಎಸ್. ಲೇಔಟ್ 40x60, 40x60, 30x50, ಎಂ.ಸಿ.ಸಿ. 'ಬಿ' ಬ್ಲಾಕ್ 40x60, 40x60, 22x60, ಎಂ.ಸಿ.ಸಿ. 'ಬಿ' ಬ್ಲಾಕ್ ಕಮರ್ಷಿಯಲ್ 17x60.
ಸಂಪರ್ಕಿಸಿ : ಪ್ರಶಾಂತ್
99726 70257

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ತಂದೂರಿ ಕುಕ್, ವೇಟರ್ಸ್, ಸಪ್ಲೈಯರ್, ಕ್ಲೀನರ್, ಬೇಕಾಗಿದ್ದಾರೆ.
ಸಂಪರ್ಕಿಸಿ.
70224 60137

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಗ್ರಾಮಾಂತರದವರಿಗೂ ಅವಕಾಶವುಂಟು. ಆಕರ್ಷಕ ವೇತನದೊಂದಿಗೆ ಊಟ - ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ :
98442-94446

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ**
ವರ್ಕ್ ಫ್ರಮ್ ಹೋಮ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ) ಆಫೀಸ್ ವರ್ಕ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ) ಯಾವುದೇ ಶುಲ್ಕ ಇರುವುದಿಲ್ಲ. ಸ್ಯಾಲರಿ : 18000, 32000.
ವಿದ್ಯಾರ್ಹತೆ : 10ನೇ ತರಗತಿಯಿಂದ ಪಿಯುಸಿ ಮತ್ತು ಡಿಗ್ರಿಯವರೆಗೆ
77605 79611

**ಮನೆ ಬಾಡಿಗೆಗಿದೆ**
ಆಂಜನೇಯ ಬಡಾವಣೆಯಲ್ಲಿ, ಗ್ರೌಂಡ್‌ಫ್ಲೋರ್‌ನಲ್ಲಿರುವ 2BHK ಮನೆ, ಎಲ್ಲಾ ಸೌಕರ್ಯ ಹೊಂದಿದ್ದು ಬಾಡಿಗೆಗೆ ದೊರೆಯುತ್ತದೆ. ಆಸಕ್ತರು ಸಂಪರ್ಕಿಸಿ :
99863 31471
ಬ್ರೋಕರ್‌ಗೆ ಅವಕಾಶವಿಲ್ಲ.

**ಸೈಟು ಮಾರಾಟಕ್ಕಿದೆ**
ಹೊಸ ಸರ್.ಎಂ.ವಿ. ಕಾಲೇಜ್ ಹತ್ತಿರ ( 30x40) ಉತ್ತರ (ರೂ. 2499)
70196 18397

**ಮನೆ ಬಾಡಿಗೆಗೆ ಇದೆ**
ಮೊದಲ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. # 2111, 3ನೇ ಮುಖ್ಯ ರಸ್ತೆ, ಚರ್ಚ್ ರೋಡ್, ಎಂ.ಸಿ.ಸಿ. "ಎ" ಬ್ಲಾಕ್
94822 41456, 96325 05611

**ಮನೆ ಬಾಡಿಗೆಗೆ / ಲೀಸ್‌ಗೆ**
ಜಯನಗರ 'ಬಿ' ಬ್ಲಾಕ್, ಭಗೀರಥ ಸರ್ಕಲ್ ಹತ್ತಿರ, ಮೊದಲನೇ ಮತ್ತು ಎರಡನೇ ಮಹಡಿಯ ಬೋರ್ ವೇಲ್ ನೀರಿನ ಸೌಕರ್ಯವಿರುವ ಎರಡು ಬೆಡ್ ರೂಂ ಮನೆ ಬಾಡಿಗೆಗೆ / ಲೀಸ್‌ಗೆ ದೊರೆಯುತ್ತದೆ.
83173 69078, 86184 95616

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
ತಂದೂರಿ ರೋಟಿ ಹೋಟೆಲ್‌ಗೆ ಹೆಂಗಸರು ಹಾಗು ರೊಟ್ಟಿ ಭಟ್ಟರು ಬೇಕಾಗಿದ್ದಾರೆ.
97401 66884, 94488 38780

**ಬೇಕಾಗಿದ್ದಾರೆ**
ಎಸ್.ಎನ್ ಎಂಟರ್‌ಪ್ರೈಸಸ್ ದಾವಣಗೆರೆ. ನಮ್ಮಲ್ಲಿ ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಸಂಪರ್ಕಿಸಿ.
85480 47353, 81976 40948

**ಬೇಕಾಗಿದ್ದಾರೆ**
ಅಕೌಂಟೆಂಟ್ - B.A or B.com
ಸಹಾಯಕರು - B.A
ಅಟೆಂಡರ್ - SSLC
ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು
ಸಂಪರ್ಕಿಸಿ :
81473 28528

**ಬಾಡಿಗೆಗೆ**
ಕೆ.ಆರ್. ರಸ್ತೆ ದೊಗ್ಗಳ್ಳಿ ಕಾಂಪೌಂಡ್, 2ನೇ ಕ್ರಾಸ್‌ನಲ್ಲಿ ನೀರಿನ ಹಾಗೂ ಶೌಚಾಲಯ ವ್ಯವಸ್ಥೆ ಇರುವ ಮೊದಲ ಮಹಡಿಯ 30x40 ಅಳತೆಯುಳ್ಳ ಮಳಿಗೆಗಳು ಬಾಡಿಗೆಗೆ ಇವೆ.
73495 98449, 98447 35319

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 11,000 ಊಟ, ರೂಂ ಉಚಿತ
ಸಂಪರ್ಕಿಸಿ :
97400 98064
97400 98047

**ಸೈಟ್ ಮಾರಾಟಕ್ಕಿದೆ**
ಶಾಮನೂರು ಡಾಲರ್ಸ್ ಕಾಲೋನಿಯಲ್ಲಿ 30x40 ದಕ್ಷಿಣ (3450/- sqft)
90366 48615

**ಬಾಡಿಗೆಗೆ**
ಪಿ.ಬಿ. ರಸ್ತೆ ವಾಣಿ ಹೊಂಡಾ ಶೋ ರೂಂ ಎದುರಿನ ರಸ್ತೆ, ಅಶ್ವಿನಿ ಆಸ್ಪತ್ರೆ ಪಕ್ಕ 16x45 ಅಡಿ ಅಳತೆಯುಳ್ಳ 5 ಮಳಿಗೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
98447 35319, 91488 81100

**WANTED**
SHRAMAJEEVI Deluxe Lodge
1) Day & Night - Manager (Computer Experience)
2) Security - 1 Nos
Contact :
96205 48704

**ADDITIONAL INCOME OPPORTUNITY**
Looking for Business Associate partners
TATA New Branch @ Davanagere
› House wife
› Retired
› Businessman
Age : 30 to 60 Years.
98447 45856

**ಟೀ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ಹುಡುಗ/ಹುಡುಗಿಯರು, ಪಾರ್ಟ್ ಟೈಂ/ಫುಲ್ ಟೈಂ ಬೇಕಾಗಿದ್ದಾರೆ.
ಫೋ. : 99800 32310

**ಬೆಂಗಳೂರಿನಲ್ಲಿ ಕಮರ್ಷಿಯಲ್ ಸೈಟ್‌ಗಳು ಮಾರಾಟಕ್ಕಿವೆ**
ಮಲ್ಲೇಶ್ವರಂ ಮಧ್ಯ ಸ್ಥಳದಲ್ಲಿ ದಕ್ಷಿಣ-ಪಶ್ಚಿಮ ಕಾರ್ನರ್ (ಕಮರ್ಷಿಯಲ್) 150x160, ಶೇಷಾದ್ರಿಪುರಂ ಉತ್ತರ-ಪಶ್ಚಿಮ ಕಾರ್ನರ್ (ಕಮರ್ಷಿಯಲ್) 120x80, ಉತ್ತರ 80x120
ಐಗೂರು ವಿಜಯಕುಮಾರ್ 99457 02495
ಬಿ.ಆರ್. ನಾಗರಾಜ್ 90083 08163

**ಪ್ರಿಂಟರ್ ಬೇಕಾಗಿದ್ದಾರೆ**
ಆಫ್‌ಸೆಟ್‌ನಲ್ಲಿ ಅನುಭವವಿರುವ ಪ್ರಿಂಟರ್ ಬೇಕಾಗಿದ್ದಾರೆ.
08192 254736

**HOUSE FOR RENT**
3BHK Ground Floor with car Parking, Near Indoor Stadium, SS Layout, 'B' BLock, Davanagere.
98446 44718, 80501 36584

**WANTED**
Marketing Executive
Education PUC or Degree
Salary 10 K + TA DA
Two Wheeler Must
Contac :
78929 94180

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.3.5.2023ರ ಬುಧವಾರ
ದಿ.4.5.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ, ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ಷಾಮರ್ಥ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ: 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ
ದಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

**WANTED**
Sr/Jr Accounts Executive
M.Com/B.Com 2+ Years Exper
Residential Engineer
Sewage Treatment Plant Operator, Hostel Supervisor, Plumber, Carpenter, Attenders and Car/Bus Drivers (Min 5+ Years of Experience.
9019964655

**ಬೇಕಾಗಿದ್ದಾರೆ**
ದಾವಣಗೆರೆ ಮತ್ತು ಚಿತ್ರದುರ್ಗ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ಸಂಬಳವಿರುತ್ತದೆ.
81056 99985, 89715 04492

**ಡಾಬಸ್‌ಪೇಟೆಯಲ್ಲಿ ಫ್ಯಾಕ್ಟರಿ ಮಾರಾಟಕ್ಕಿದೆ**
ಡಾಬಸ್‌ಪೇಟೆ (ಜಿಂದಾಲ್ ಫ್ಯಾಕ್ಟರಿ ಹತ್ತಿರ) 2 ಎಕರೆ 10 ಗುಂಟೆ ಬಿಲ್ಡಿಂಗ್ ಮತ್ತು ಪವರ್ ವುಳ್ಳ ಕೈಗಾರಿಕಾ ಜಾಗ ಮಾರಾಟಕ್ಕಿದೆ.
ಐಗೂರು ವಿಜಯಕುಮಾರ್ 99457 02495
ಬಿ.ಆರ್. ನಾಗರಾಜ್ 90083 08163

**ಲೋನ್ ಕೊಡಲಾಗುತ್ತದೆ**
ಇಟ್ಟಿಗೆ ಭಟ್ಟಿ, ಪ್ರಾವಿಜನ್ ಸ್ಟೋರ್, ಬಟ್ಟೆ ವ್ಯಾಪಾರ, ಸಣ್ಣ ವ್ಯಾಪಾರಿಗಳಿಗೆ, ಸಾಲ ಸೌಲಭ್ಯವಿದೆ, ಮನೆ ಖರೀದಿ ಮತ್ತು ನಿರ್ಮಾಣಕ್ಕೂ ಸಾಲ ಸೌಲಭ್ಯವಿದೆ, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ .
74835 24662

**Tuition for supplementary exam**
PCMB, COMMERCE, ARTS.
100% ಫಲಿತಾಂಶ
ಸಿಂಚನ ಕೋಚಿಂಗ್ ಸೆಂಟರ್ ದಾವಣಗೆರೆ.
88614 45913, 85532 78258

**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಷೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರುಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 1200 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು ಸಂಪರ್ಕಿಸಿ.
96205 95579

**REQUIRED SALES EXECUTIVE**
Experience: 2 – 3 years
Contact & whatsap :
9448046571,7899337571
Email: sv.salesvenu15@mail.com

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಕೃಷ್ಣ ಫ್ಲೆಕ್ಸ್ ಪ್ರಿಂಟಿಂಗ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. ಹಳೇ ಬಸ್ ನಿಲ್ದಾಣದ ಎದುರು, ಪಿ.ಬಿ ರಸ್ತೆ, ದಾವಣಗೆರೆ.
96117 71970

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED ACCOUNTANT**
Graduate with computer knowledge in accounting experience for a reputed company in APMC YARD DAVANGERE.
94495 85680, 98455 55039

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ, ಮಹಾರಾಜಪೇಟೆ, ದಾವಣಗೆರೆ.
98445 81966

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
SMS ಕಾನ್ವೆಂಟ್ & ಪ್ರೌಢಶಾಲೆ
ರಾಜೀವ್‌ಗಾಂಧಿ ಬಡಾವಣೆ ಕೊಂಡಜ್ಜಿ ರಸ್ತೆ, ದಾವಣಗೆರೆ, ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಈ ಕೆಳಕಂಡ ಅರ್ಹ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. BA, B.Ed - Social, Hindi, Kan. D.Ed - 2. PUC, B.Sc - 2. SDA- 1.
ಸಂಪರ್ಕಿಸಿ : 98447 35946, 96631 95531, 80508 77095

**CHANGE OF NAME**
I Zulfeqar Bieg S/C Fazis 38 years, # 1307, 2nd main, 2nd cross, Jalinagar, Davangere. My Son's name is Mohammad Rihan Bieg it is correct in educational Records. In Passport name Entered as Mohammad Rihan Beg. I state that the above said both the names are him only. none-else as per affidevit dated 24.4.2023 Notary Davangere.
Sd/- Zulfeqar Bieg



**ಕುಂದುವಾಡ ಕೆರೆ** ಮೇ ತಿಂಗಳು ಬಂತೆಂದರೆ ಮೇ ಫ್ಲವರ್ ಮೇಳೈಸುವುದು. ಕುಂದುವಾಡ ಕೆರೆಯ ಬಳಿ ಇರುವ ಮೇ ಫ್ಲವರ್ ಸಾಲು ಮರಗಳ ದೃಶ್ಯ.

# ಭಜರಂಗ ದಳ ನಿಷೇಧದ ಭರವಸೆಗೆ ಬಿಜೆಪಿ ತರಾಟೆ

**ಹನುಮಂತನಿಗೆ ಜೈ ಎನ್ನುವವರ ಬಂಧನಕ್ಕೆ ಕಾಂಗ್ರೆಸ್ ಮುಂದಾಗಿದೆ : ಪ್ರಧಾನಿ ಮೋದಿ**

ನವದೆಹಲಿ, ಮೇ 2 -ಕರ್ನಾಟಕದಲ್ಲಿ ಅಧಿಕಾ ರಕ್ಕೆ ಬಂದರೆ ಭಜರಂಗ ದಳ ನಿಷೇಧಿಸುವುದಾಗಿ ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯಲ್ಲಿ ತಿಳಿಸಿರುವುದು ಬಿಜೆಪಿಯ ತೀವ್ರ ಆಕ್ಷೇಪಕ್ಕೆ ಕಾರಣವಾಗಿದೆ.

ಕಾಂಗ್ರೆಸ್ ನಿಲುವನ್ನು ಖಂಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಹನುಮಂತ ದೇವರನ್ನು ಬೀಗದೊಳಗೆ ಇರಿಸಲು ಕಾಂಗ್ರೆಸ್ ಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಕರ್ನಾಟಕದ ಹೊಸಪೇಟೆಯಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ, ಕಾಂಗ್ರೆಸ್ ಪಕ್ಷ ಈ ಹಿಂದೆ ಅಯೋಧ್ಯೆಯ ರಾಮ ಮಂದಿರಕ್ಕೆ ಬೀಗ ಹಾಗಿತ್ತು. ಈಗ ಜೈ ಭಜರಂಗ ಬಲಿ ಎಂದು ಹೇಳುವವರನ್ನು ಬಂಧಿಸಲು ಮುಂದಾಗಿದೆ ಎಂದು ಆರೋಪಿಸಿದರು.

ಹನುಮಂತ ದೇವರ ನೆಲಕ್ಕೆ ಬಂದಿರುವುದು ಹಾಗೂ ಇಲ್ಲಿ ನಮಿಸುವ ಅವಕಾಶ ದೊರೆತಿರುವುದು ನನ್ನ ಅದೃಷ್ಟ. ಆದರೆ, ಇದೇ ವೇಳೆ ಹನುಮಂತ ದೇವರಿಗೆ ಬೀಗ ಹಾಕುವುದಾಗಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹೇಳಿದೆ ಎಂದರು.

ಮೊದಲು ಪ್ರಭು ಶ್ರೀ ರಾಮ ದೇವರ ಬಗ್ಗೆ ಕಾಂಗ್ರೆಸ್‌ಗೆ ಸಮಸ್ಯೆ ಇತ್ತು. ಈಗ ಜೈ ಭಜರಂಗ ಬಲಿ ಎನ್ನುವವರ ಬಗ್ಗೆ ಅವರಿಗೆ ಸಮಸ್ಯೆ ಇದೆ ಎಂದೂ ಮೋದಿ ಹೇಳಿದರು.

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿರುವ ಅಂಜನಾದ್ರಿಯು ಹನುಮಂತ ದೇವರ ಜನ್ಮಸ್ಥಳ ಎಂಬ ಪ್ರತೀತಿ ಇದೆ. ಈ ಸ್ಥಳವನ್ನು ಅಭಿವೃದ್ಧಿ ಪಡಿಸುವುದಾಗಿ ರಾಜ್ಯ ಬಿಜೆಪಿ ಸರ್ಕಾರ ಈ ಹಿಂದೆ ತಿಳಿಸಿತ್ತು. ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ವಕ್ತಾರ ಸಂಬಿತ್ ಪಾತ್ರ, ಭಜರಂಗ ದಳ ನಿಷೇಧಿಸುವುದಾಗಿ ಹೇಳುವ ಮೂಲಕ ಹನುಮಂತ ದೇವರನ್ನು ಕಾಂಗ್ರೆಸ್ ಅವಮಾನಿಸುತ್ತಿದೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷ ಓಲೈಕೆ ರಾಜಕೀಯದ ಪರಾಕಾಷ್ಠೆಗೆ ತಲುಪಿದೆ. ಹನುಮಂತ ದೇವರನ್ನು ಅವಮಾನಿಸುವ ಮೂಲಕ ಪಿ.ಎಫ್.ಐ. ರಕ್ಷಿಸಲು ಕಾಂಗ್ರೆಸ್ ಯತ್ನಿಸಿದೆ ಎಂದವರು ಟೀಕಿಸಿದರು.

ಕರ್ನಾಟಕ ಹನುಮಂತ ದೇವರ ಭೂಮಿಯಾಗಿದೆ. ಕಾಂಗ್ರೆಸ್ ಇದೇ ನೆಲದಲ್ಲಿ ದೇವರನ್ನು ಅವಮಾನಿಸುತ್ತಿದೆ ಎಂದವರು ಆರೋಪಿಸಿದರು.

ಮಂಗಳವಾರ ಪ್ರಣಾಳಿಕೆ ಬಿಡುಗಡೆ ಮಾಡಿದ್ದ ಕಾಂಗ್ರೆಸ್, ಭಜರಂಗ ದಳ ಹಾಗೂ ಪಿ.ಎಫ್.ಐ. ರೀತಿಯ ಸಂಘಟನೆಗಳನ್ನು ನಿಷೇಧಿಸುವುದಾಗಿ ಹೇಳಿತ್ತು. ಆದರೆ, ಆರೋಪಗಳನ್ನು ತಳ್ಳಿ ಹಾಕಿರುವ ಕಾಂಗ್ರೆಸ್, ಹನುಮಂತ ದೇವರನ್ನು ಭಜರಂಗ ದಳದ ಜೊತೆ ಹೋಲಿಕೆ ಮಾಡಿರುವುದಕ್ಕಾಗಿ ಪ್ರಧಾನ ಮಂತ್ರಿ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದೆ.

ಈ ಬಗ್ಗೆ ಮಾತನಾಡಿರುವ ಕಾಂಗ್ರೆಸ್ ವಕ್ತಾರ ಪವನ್ ಖೇರ, ಪ್ರಧಾನಿ ಹೇಳಿಕೆಯಿಂದ ನಮ್ಮ ಧಾರ್ಮಿಕ ಭಾವನೆಗಳಿಗೆ ನೋವಾಗಿದೆ. ಪ್ರಧಾನಿ ಮೋದಿಗೆ ಹನುಮಂತ ದೇವರನ್ನು ಅವಮಾನಿಸುವ ಹಕ್ಕಿಲ್ಲ ಎಂದಿದ್ದಾರೆ.

## ಎಸ್ಸೆಸ್ಸೆಂಗೆ ಶ್ರೀಶೈಲ ಜಗದ್ಗುರು ಗುರುರಕ್ಷೆ



ದಾವಣಗೆರೆ, ಮೇ 2- ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಇಂದು ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಭೇಟಿ ಮಾಡಿ ಗುರುರಕ್ಷೆ ಪಡೆದುಕೊಂಡರು. ಈ ಸಂದರ್ಭದಲ್ಲಿ ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ್ ಸೇರಿದಂತೆ ಮತ್ತಿತರರಿದ್ದರು.

## ಕಾಶಿ ಜಗದ್ಗುರುಗಳಿಂದ ನಾಗರಾಜ್ ಲೋಕಿಕೆರೆಗೆ ಆಶೀರ್ವಾದ



ದಾವಣಗೆರೆ, ಮೇ 2- ಖಾಸಗಿ ಕಾರ್ಯಕ್ರಮ ನಿಮಿತ್ತ ಇಂದು ನಗರಕ್ಕಾಗಮಿಸಿದ್ದ ವಾರಣಾಸಿಯ ಕಾಶಿ ಪೀಠದ ನೂತನ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಮಹಾಸ್ವಾಮಿಗಳನ್ನು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಭೇಟಿ ನೀಡಿ ಗುರುಗಳ ಕೃಪಾಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮುಖಂಡ ಎನ್.ಎ. ಮುರುಗೇಶ್ ಸೇರಿದಂತೆ ಇತರರು ಇದ್ದರು.

## ಪಿಸಾಳೆ ಕಾಂಪೌಂಡ್‌ನಲ್ಲಿ ಇಂದು ಉತ್ತರದ ಕಾಂಗ್ರೆಸ್ ಅಭ್ಯರ್ಥಿ ಎಸ್ಸೆಸ್ಸೆಂ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್ ಮಲ್ಲಿಕಾರ್ಜುನ್ ಅವರು ಇಂದು ಬೆಳಿಗ್ಗೆ 9.30ಕ್ಕೆ ಪಿ.ಬಿ. ರಸ್ತೆ, ಪಿಸಾಳೆ ಕಾಂಪೌಂಡ್, ಗುಳ್ಳಮ್ಮನ ದೇವಸ್ಥಾನದಿಂದ ಚುನಾವಣಾ ಪ್ರಚಾರ ನಡೆಸುವರು.

# ಎಸ್ಸೆಸ್-ಎಸ್ಸೆಸ್ಸೆಂಗೆ ಸ್ವಕುಳಸಾಳಿ ಸಮಾಜದ ಬೆಂಬಲ



ದಾವಣಗೆರೆ, ಮೇ 2- ದಾವಣಗೆರೆ ದಕ್ಷಿಣ ಮತ್ತು ಉತ್ತರ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರುಗಳನ್ನು ಬೆಂಬಲಿಸಲು ಸ್ವಕುಳ ಸಾಳಿ ಸಮಾಜ ತೀರ್ಮಾನಿಸಿದೆ.

ನಗರದ ಶ್ರೀ ವೀರ ಮದಕರಿ ನಾಯಕ (ಹೊಂಡದ ಸರ್ಕಲ್) ವೃತ್ತದ ಬಳಿಯ ಸ್ವಕುಳ ಸಾಳಿ ಸಮಾಜ ಮಂದಿರದಲ್ಲಿ ಇಂದು ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಎಸ್ಸೆಸ್ ಅವರನ್ನು ಅಭಿನಂದಿಸಿ, ಚುನಾವಣೆಯಲ್ಲಿ ಬೆಂಬಲ ನೀಡುವ ತೀರ್ಮಾನವನ್ನು ಪ್ರಕಟಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸ್ವಕುಳ ಸಾಳಿ ಸಮಾಜದ ಅಧ್ಯಕ್ಷ ಜಿ.ಪಿ. ಮೋಹನ್ ಅವರು ಶಾಮನೂರು ಶಿವಶಂಕರಪ್ಪ ಅವರನ್ನು ಸಮಾಜದ ಪರವಾಗಿ ಶಾಲು ಹೊದಿಸಿ ಸನ್ಮಾನಿಸಿ, ಗೌರವಿಸುವು ದರ ಮೂಲಕ ವಿಧಾನಸಭಾ ಚುನಾವಣೆಯಲ್ಲಿ ಎಸ್ಸೆಸ್ ಮತ್ತು ಎಸ್ಸೆಸ್ಸೆಂ ಇಬ್ಬರೂ ಅತ್ಯಧಿಕ ಮತ ಗಳಿಂದ ಜಯ ಗಳಿಸಲಿ ಎಂದು ಶುಭ ಹಾರೈಸಿದರು.

ಅತಿಥಿ ಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದ ಸ್ವಕುಳ ಸಾಳಿ ಸಮಾಜದ ಕಾರ್ಯದರ್ಶಿ ಧರ್ಮರಾಜ ಏಕಬೋಟೆ, ಹಿಂದುಳಿದ ಸಮಾಜಗಳಲ್ಲೊಂದಾದ ಸ್ವಕುಳ ಸಾಳಿ ಸಮಾಜಕ್ಕೆ ಎಸ್ಸೆಸ್ ಮತ್ತು ಎಸ್ಸೆಸ್ಸೆಂ ನೀಡುತ್ತಿರುವ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.

ಎಸ್.ಎಸ್. ಮಲ್ಲಿಕಾರ್ಜುನ್ ಅವರು ಹಿಂದೆ ಸಚಿವರಾಗಿದ್ದ ಸಂದರ್ಭದಲ್ಲಿ ಸ್ವಕುಳ ಸಾಳಿ ಸಮಾಜಕ್ಕೆ ನಿವೇಶನವನ್ನು ಮಂಜೂರು ಮಾಡಿಸಿ ಕೊಟ್ಟಿದ್ದರು. ಆ ನಿವೇಶನದಲ್ಲೀಗ ಸಮುದಾಯ ಭವನವನ್ನು ನಿರ್ಮಿಸಲುದ್ದೇಶಿಸಲಾಗಿದ್ದು, ಶೀಘ್ರ ದಲ್ಲೇ ಶಂಕುಸ್ಥಾಪನೆ ಸಮಾರಂಭವನ್ನು ನಡೆಸುವು ದಾಗಿ ಧರ್ಮರಾಜ ಏಕಬೋಟೆ ತಿಳಿಸಿದರು.

ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಎಸ್ಸೆಸ್, ಸ್ವಕುಳ ಸಾಳಿ ಸಮಾಜದ ಅನೇಕ ಹಿರಿಯರೊಂದಿಗೆ ಹೊಂದಿರುವ ತಮ್ಮ ಒಡನಾಟವನ್ನು ಸಮಾಜ ಬಾಂಧವರೊಂದಿಗೆ ಹಂಚಿಕೊಂಡರಲ್ಲದೇ, ಈ ಸಮಾಜವು ನಿರ್ಮಿಸಲುದ್ದೇಶಿಸಿರುವ ಸಮುದಾಯ ಭವನಕ್ಕೆ ಸಹಾಯ-ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಿ. ಮಾಲತೇಶ ರಾವ್ ಜಾಧವ್, ನಗರಸಭೆ ಮಾಜಿ ಅಧ್ಯಕ್ಷ ಬಿ. ವೀರಣ್ಣ, ಕೆಪಿಸಿಸಿ ಕಾರ್ಯದರ್ಶಿ ಅಸಗೋಡು ಜಯಸಿಂಹ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸ್ವಕುಳಸಾಳಿ ಸಮಾಜದ ಉಪಾಧ್ಯಕ್ಷ ಸುರೇಂದ್ರ ವಾಂಜ್ರೆ, ಸ್ವಕುಳ ಸಾಳಿ ಸಮಾಜದ ಖಜಾಂಚಿ ಗಣೇಶ ಕ್ಷೀರಸಾಗರ, ಆನಂದ ಸಫಾರೆ, ಮಹಿಳಾ ಮಂಡಳಿ ಕಾರ್ಯದರ್ಶಿ ಶ್ರೀಮತಿ ಸುಜಾತ ರೋಖಡೆ, ಶಿವಾಜಿ ಢಗೆ, ವರದಾ ಢಗೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸ್ವಕುಳಸಾಳಿ ಸಮಾಜದ ಮಹಿಳಾ ಮಂಡಳಿಯ ಸದಸ್ಯರು ಪ್ರಾರ್ಥಿಸಿದರು. ಸಮಾಜದ ಕಾರ್ಯದರ್ಶಿ ಮಂಜುನಾಥ ಕಾಂಬ್ಳೆ ವಂದಿಸಿದರು.

## ರಾಹುಲ್ ಶಿಕ್ಷೆ: ಮಧ್ಯಂತರ ತಡೆಗೆ ಹೈಕೋರ್ಟ್ ನಕಾರ

ಅಹಮದಾಬಾದ್, ಮೇ 2 – ಮೋದಿ ಉಪನಾಮದ ಕುರಿತ ಹೇಳಿಕೆಗಾಗಿ ವಿಧಿಸಲಾಗಿರುವ ಶಿಕ್ಷೆ ತಡೆಯುವ ಮಧ್ಯಂತರ ಆದೇಶ ಕೋರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದಾಖಲಿಸಿದ್ದ ಅರ್ಜಿಯನ್ನು ಗುಜರಾತ್ ಹೈಕೋರ್ಟ್ ತಳ್ಳಿ ಹಾಕಿದೆ.

ಬೇಸಿಗೆ ರಜೆಯ ನಂತರ ಈ ವಿಷಯದ ಬಗ್ಗೆ ಅಂತಿಮ ಆದೇಶ ಹೊರಡಿಸುವುದಾಗಿ ನ್ಯಾಯಾಲಯ ಹೇಳಿದೆ.

ರಾಹುಲ್ ಗಾಂಧಿ ಅವರ ಪರವಾಗಿ ಹಾಜರಿದ್ದ ವಕೀಲ ಅಭಿಷೇಕ್ ಮನು ಸಿಂಘ್ವಿ, ಈ ವಿಷಯ ತುರ್ತಿನದ್ದಾಗಿದೆ. ಮಧ್ಯಂತರ ಇಲ್ಲವೇ ಅಂತಿಮ ಆದೇಶ ನೀಡಬೇಕು ಎಂದು ಕೋರಿದರು.

ಆದರೆ, ಈ ಹಂತದಲ್ಲಿ ಮಧ್ಯಂತರ ಆದೇಶ ಹೊರಡಿಸುವುದಿಲ್ಲ. ಬೇಸಿಗೆ ರಜೆಯ ನಂತರ ವಿಚಾರಣೆ ನಡೆಸುವುದಾಗಿ ನ್ಯಾಯಮೂರ್ತಿ ಹೇಮಂತ್ ಪ್ರಚಕ್ ತಿಳಿಸಿದರು.

ಮೇ 8ರಿಂದ ಜೂನ್ 3ರವರೆಗೆ ನ್ಯಾಯಾಲಯಕ್ಕೆ ಬೇಸಿಗೆ ರಜೆ ಇದೆ.

## 14ನೇ ವಾರ್ಡ್‌ನಲ್ಲಿ ಇಂದು ದಕ್ಷಿಣದ ಕಾಂಗ್ರೆಸ್ ಅಭ್ಯರ್ಥಿ ಎಸ್ಸೆಸ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರು ನಗರ ಪಾಲಿಕೆಯ 14ನೇ ವಾರ್ಡ್‌ನಲ್ಲಿ ಇಂದು ಪ್ರಚಾರ ನಡೆಸುವರು.

ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ವಾರ್ಡ್ ನಂ.14ರ ವ್ಯಾಪ್ತಿಯಲ್ಲಿ ಬರುವ ಜುಬ್ಲಿಬಾವಿ ರಸ್ತೆ, ವಿಠಲಮಂದಿರ ರಸ್ತೆ, ಹುಬ್ಬಳ್ಳಿ ಚೌಡಪ್ಪನ ಗಲ್ಲಿ, ಕೆ.ಆರ್.ರಸ್ತೆ, ಎಸ್.ಎಸ್. ಆಸ್ಪತ್ರೆ ರಸ್ತೆ, ನೂರಾನಿ ಆಟೋಸ್ಟ್ಯಾಂಡ್, ನೂರಾನಿ ಶಾದಿ ಮಹಲ್, ಕಲ್ಲೇಶ್ವರ ಮಿಲ್ ಮುಂಭಾಗದಿಂದ ಗಣೇಶ ದೇವಸ್ಥಾನ, ಚೌಕಿಪೇಟೆ ಸರ್ಕಲ್ ನಲ್ಲಿ ಮನೆ- ಮನೆಗೆ ತೆರಳಿ ಪ್ರಚಾರ ನಡೆಸುವರು.

ಪ್ರಚಾರ ಕಾರ್ಯಕ್ರಮದಲ್ಲಿ ವಾರ್ಡ್‌ನ ಮಹಾನಗರ ಪಾಲಿಕೆ ಸದಸ್ಯರಾದ ಕೆ.ಚಮನ್ ಸಾಬ್ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## 2, 3, 4, 7, 8, 10 ನೇ ವಾರ್ಡುಗಳಲ್ಲಿ ಇಂದು ದಕ್ಷಿಣದ ಬಿಜೆಪಿ ಅಭ್ಯರ್ಥಿ ಅಜಯ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ಅವರು ಇಂದು ಬೆಳಿಗ್ಗೆ 8 ರಿಂದ ನಗರ ಪಾಲಿಕೆಯ 7ನೇ ವಾರ್ಡ್ ಜಾಲಿನಗರ, 8ನೇ ವಾರ್ಡ್ ಸುರೇಶ್ ನಗರ, ಮತ್ತು 10ನೇ ವಾರ್ಡ್ ಗಣೇಶ್ ಪೇಟೆಯಲ್ಲಿ ಇಂದು ಪ್ರಚಾರ ನಡೆಸುವರು. ನಂತರ 2ನೇ ವಾರ್ಡ್ ಎಸ್ಸೆಸ್ಸೆಂ ನಗರ, 3ನೇ ವಾರ್ಡ್ ಮಂಡಕ್ಕಿ ಭಟ್ಟಿ, ಬಿಡಿ ಲೇಔಟ್ ಮತ್ತು 4ನೇ ವಾರ್ಡ್‌ನ ಬಾಷಾ ನಗರದಲ್ಲಿ ಮತಯಾಚನೆ ನಡೆಸುವರು. ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ ಭಾಗವಹಿಸಲಿದ್ದಾರೆ ಎಂದು ಮಂಡಲ ಕಾರ್ಯದರ್ಶಿ ರಾಜು ನೀಲಗುಂದ ಅವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ


ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಶ್ರೀ ಜಯದೇವ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರೊ. ನಿರ್ಮಲ ಪಾಳೇಗಾರ ಮತ್ತು ಡಾ. ಕರಿಬಸಪ್ಪ ಹಂಜಿ, ಶ್ರೀಮತಿ ಶಾಂತಮ್ಮ ಹಿರೇಗೌಡರ್, ಶ್ರೀಮತಿ ದೇವೀರಮ್ಮ ಕುಂಬಿ ಇವರು ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ.

## ನಗರದಲ್ಲಿ ಸ್ಪೋರ್ಟ್ಸ್, ಫಿಟ್‌ನೆಸ್ ಕ್ಯಾಂಪ್

ದಾವಣಗೆರೆ, ಮೇ 2- ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ಮತ್ತು ವಿದ್ವಾನ್ ಟೆಕ್ವಾಂಡೋ ಅಕಾಡೆಮಿ ಇವರುಗಳ ಸಂಯುಕ್ತಾಶ್ರಯದಲ್ಲಿ 4 ವರ್ಷಕ್ಕೂ ಮೇಲ್ಪಟ್ಟ ಹುಡುಗರಿಗೆ ಸ್ಪೋರ್ಟ್ಸ್, ಫಿಟ್‌ನೆಸ್ ಅಂಡ್ ಸೆಲ್ಫ್ ಡಿಫೆನ್ಸ್ ಟ್ರೈನಿಂಗ್ ಕ್ಯಾಂಪ್ ಕಾರ್ಯಕ್ರಮವನ್ನು ಇಂದಿನಿಂದ ಇದೇ ದಿನಾಂಕ 30 ರವರೆಗೆ ಪ್ರತಿ ದಿನ ಸಂಜೆ 5 ರಿಂದ 6ರವರೆಗೆ ನಗರದ ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ವಿವರಗಳಿಗೆ ಮೊಬೈಲ್ ಸಂಖ್ಯೆ 86602 88828 ಗೆ ಸಂಪರ್ಕಿಸಿ.

# ಲಿಂಗಾಯತರ ಗುತ್ತಿಗೆದಾರರಂತೆ ಬಿಜೆಪಿ ವರ್ತನೆ : ಡಾ.ಸಿದ್ದನಗೌಡ ಪಾಟೀಲ್



ದಾವಣಗೆರೆ, ಮೇ 2- ಕಾರ್ಪೊರೇಟ್ ಕಂಪನಿಗಳ ಹಿತ ಕಾಪಾಡುವ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಬೇಕೆಂದು ಭಾರತೀಯ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಡಾ. ಸಿದ್ದನಗೌಡ ಪಾಟೀಲ್ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಹಾಗೂ ಬಿಜೆಪಿ ಆರ್ಥಿಕ ನೀತಿಗಳಲ್ಲಿ ವ್ಯತ್ಯಾಸ ಇಲ್ಲದಿದ್ದರೂ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನ ವಿರೋಧಿ ನೀತಿಗಳ ವಿರುದ್ಧ ಪ್ರತಿಭಟಿಸಬಹುದು. ಆದರೆ ಬಿಜೆಪಿ ಬಂದರೆ ವಿರೋಧ ಪಕ್ಷಗಳು ಪ್ರತಿಭಟಿಸುವ ಹಕ್ಕನ್ನೇ ಕಳೆದುಕೊಳ್ಳಬೇಕಾಗುತ್ತದೆ ಎಂದರು.

ಬಿಜೆಪಿಯ ಮತಾಂಧ ರಾಜಕಾರಣ ತಡೆಯಲು ರಾಜ್ಯದ 215 ಮತ ಕ್ಷೇತ್ರಗಳಲ್ಲಿ ಸಿಪಿಐ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತದೆ. ಉಳಿದ ಕ್ಷೇತ್ರಗಳಲ್ಲಿ ಸಿಪಿಐ ಹಾಗೂ ಮಿತ್ರ ಪಕ್ಷಗಳು ಸ್ಪರ್ಧಿಸಿವೆ ಎಂದು ಹೇಳಿದರು.

ಲಿಂಗಾಯತರ ಬಗ್ಗೆ ಮಾತನಾಡುವ ಬಿಜೆಪಿಗೆ ತಾತ್ವಿಕ ಬಲವಿಲ್ಲ. ಲಿಂಗಾಯತರ ಗುತ್ತಿಗೆದಾರರಂತೆ ಬಿಜೆಪಿಯವರು ವರ್ತಿಸುತ್ತಿದ್ದಾರೆ. ವಾಸ್ತವವಾಗಿ ಬಿಜೆಪಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಲಿಂಗಾಯತ ತತ್ವಗಳು ವಿರುದ್ಧವಾಗಿವೆ. ಬಿಜೆಪಿಗೆ ಸಂವಿಧಾನಾತ್ಮಕವಾಗಿಯೂ, ತಾತ್ವಿಕವಾಗಿಯೂ ಲಿಂಗಾಯತವನ್ನು ರಾಜಕಾರಣಕ್ಕೆ ಬಳಸುವ ಹಕ್ಕಿಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಆವರಗೆರೆ ಚಂದ್ರು, ಹೆಚ್. ಜಿ. ಉಮೇಶ್, ಆವರಗೆರೆ ವಾಸು, ಆನಂದರಾಜ್, ಟಿ.ಎಸ್. ನಾಗರಾಜ್, ಐರಣಿ ಚಂದ್ರು ಉಪಸ್ಥಿತರಿದ್ದರು.

## 35ನೇ ವಾರ್ಡಿನಲ್ಲಿ ಇಂದು ನಾಗರಾಜ್ ಲೋಕಿಕೆರೆ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ನಗರ ಪಾಲಿಕೆಯ 35ನೇ ವಾರ್ಡಿನಲ್ಲಿ ಇಂದು ಪ್ರಚಾರ ನಡೆಸುವರು.

ಬೆಳಗ್ಗೆ 7.30ಕ್ಕೆ ನಿಟ್ಟುವಳ್ಳಿ ಲೆನಿನ್ ನಗರದಲ್ಲಿ ಪ್ರಚಾರ ನಡೆಸಲಿದ್ದು, ಶ್ರೀ ದುರ್ಗಾಂಬಿಕ ದೇವಿ ದೇವಸ್ಥಾನದಿಂದ ಪ್ರಾರಂಭವಾಗುವುದು. ಸಂಜೆ 4ಕ್ಕೆ 33ನೇ ವಾರ್ಡಿನ ಸರಸ್ವತಿ ಬಡಾವಣೆಯಲ್ಲಿ ಮತ ಯಾಚಿಸಲಿದ್ದು, ನಿಟುವಳ್ಳಿಯ ಎಕೆಟಿ ವೃತ್ತದಿಂದ ಪ್ರಾರಂಭವಾಗಲಿದೆ. 34ನೇ ವಾರ್ಡ್‌ನ ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ ಮತ ಯಾಚಿಸುವರು.


**ಶುಭ ವಿವಾಹಕ್ಕೆ ಶುಭಾಶಯಗಳು**



ನನ್ನ ಅಣ್ಣ
ವಿಶ್ವನಾಥ್, ಶ್ರೀಮತಿ ಕವಿತ
ಇವರ ಜೇಷ್ಠ ಪುತ್ರಿ
ಪೂಜಾ
ಕಾಶೀನಾಥ್
ಶ್ರೀಮತಿ ರುದ್ರಮ್ಮ
ಗುರುಸಿದ್ದಪ್ಪನವರು ಅಂಗಡಿ,
ಕೋಲ್ಕುಂಟೆ.
ಇವರ ತೃತೀಯ ಪುತ್ರ

ಇವರ ವಿವಾಹವು ದಾವಣಗೆರೆ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವ ವಧು-ವರರಿಗೆ ಶುಭಾಶಯಗಳು.

ಶುಭ ಕೋರುವವರು :
ಹೆಚ್.ಸಿ. ಮೃತ್ಯುಂಜಯ ಪಾಟೀಲ್, ಹೊನ್ನಾಳಿ.
ಜನತಾವಾಣಿ ಪ್ರತಿನಿಧಿ







॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತುಃ ॥ ॥ ಶ್ರೀ ವೀರ ಬಸವೇಶ್ವರ ಪ್ರಸನ್ನ ॥

ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ಇಷ್ಟಲಿಂಗ ಮಹಾಪೂಜೆಯೊಂದಿಗೆ

**ಷಷ್ಠಿಪೂರ್ತಿ, ವಿವಾಹ ವಾರ್ಷಿಕೋತ್ಸವ ಸಮಾರಂಭ**



ದಿವ್ಯ ಸಾನ್ನಿಧ್ಯ :
ಶ್ರೀ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು, ಶ್ರೀ ಶ್ರೀಶೈಲ.
ಶ್ರೀ ಷ.ಬ್ರ. ಓಂಕಾರ ಶಿವಾಚಾರ್ಯ ಸ್ವಾಮಿಗಳು, ಪುರವರ್ಗ ಹಿರೇಮಠ, ಆವರಗೊಳ್ಳ.
ಶ್ರೀ ಎಂ. ಮಲ್ಲಿಕಾರ್ಜುನ ಶಾಸ್ತ್ರಿಗಳು, ನಿವೃತ್ತ ಪ್ರಧಾನ ಅರ್ಚಕರು, ಶ್ರೀಶೈಲ ದೇವಸ್ಥಾನ, ಆಂಧ್ರಪ್ರದೇಶ.

ನಮ್ಮ ಅಜ್ಜಿ, ತಾತನವರಾದ
ಶ್ರೀಮತಿ ಎಸ್.ವಿ. ಸುಧಾರಾಣಿ (ನಿವೃತ್ತ ಸಹ ಶಿಕ್ಷಕಿ)
ಶ್ರೀ ಎಂ. ಬನ್ನಯ್ಯ (ವ್ಯವಸ್ಥಾಪಕರು, ಶ್ರೀಶೈಲ ಮಠ)
ಇವರ ಷಷ್ಠಿಪೂರ್ತಿ, ವಯೋ ನಿವೃತ್ತಿ ಹಾಗೂ ವಿವಾಹ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ತಾವುಗಳು ಸಹಕುಟುಂಬ ಸಮೇತರಾಗಿ ಆಗಮಿಸಬೇಕಾಗಿ ವಿನಂತಿ.


ಸ್ವಾಗತ ಕೋರುವವರು : ಚಿ. ಮಂಥನ್ ಹಿರೇಮಠ್, ಶ್ರೀಮತಿ ಮಲ್ಲಿಕ, ಮಂಜುನಾಥ್ ಹಿರೇಮಠ ಹಾಗೂ ಕುಟುಂಬ ವರ್ಗದವರು ಮತ್ತು ಸ್ನೇಹಿತರು



ದಿನಾಂಕ : 03.05.2023ರ ಬುಧವಾರ, ಸಮಯ : ಮಧ್ಯಾಹ್ನ 12.30 ಕ್ಕೆ ಸ್ಥಳ : ಅಶ್ವಿನಿ ಆಯುರ್ವೇದಿಕ್ ಕಾಲೇಜು ಹತ್ತಿರ, ಅಶ್ವಿನಿ ನಗರ, ಪಿ.ಬಿ ರೋಡ್, ದಾವಣಗೆರೆ.

ಶುಭ ಕೋರುವವರು :

- ಶ್ರೀ ಅಥಣಿ ವೀರಣ್ಣ, ಲೆಕ್ಕ ಪರಿಶೋಧಕರು
- ಶ್ರೀ ಡಿ.ಎಂ. ಹಾಲಸ್ವಾಮಿ, ಉಪಾಧ್ಯಕ್ಷರು, ಎಸ್‌ಜೆವಿಪಿ ವಿದ್ಯಾಪೀಠ, ಹರಿಹರ.
- ಶ್ರೀ ದೇವರಮನೆ ಶಿವಕುಮಾರ್, ಜಿಲ್ಲಾಧ್ಯಕ್ಷರು, ವೀರಶೈವ ಮಹಾಸಭಾ
- ಶ್ರೀ ಆರ್.ಟಿ. ಪ್ರಶಾಂತ್, ಕಾರ್ಯದರ್ಶಿ, ಎಸ್‌ಜೆವಿಪಿ ವಿದ್ಯಾಪೀಠ, ಹರಿಹರ.
- ಶ್ರೀಮತಿ ಚಂದ್ರಿಕಾ, ಶ್ರೀ ಕೆ.ಎಂ. ಪರಮೇಶ್ವರಯ್ಯ, ಮಾಲೀಕರು, ಶ್ರೀ ಕೊಟ್ಟೂರೇಶ್ವರ ರೈಸ್‌ಮಿಲ್
- ಶ್ರೀ ಕೆ.ಎಂ. ಚನ್ನಬಸವಯ್ಯ, ರಿಯಲ್ ಎಸ್ಟೇಟ್
- ಶ್ರೀಮತಿ ತ್ರಿವೇದಿ, ಶ್ರೀ ಟಿ.ಎಂ. ವಿನಾಯಕಸ್ವಾಮಿ
- ಶ್ರೀ ಎ.ಎಂ. ಕೊಟ್ರೇಶ್, ಸಮಾಜದ ಮುಖಂಡರು
- ಶ್ರೀ ದೇವರಮನೆ ಶಿವಯೋಗಿ ✦ ಶ್ರೀ ಎಸ್. ಬಸವರಾಜಯ್ಯ
- ಶ್ರೀಮತಿ ಜಯ್ಯಮ್ಮ
- ಶ್ರೀಮತಿ ಉಮಾ ವಾಗೀಶ್, ನಿರ್ದೇಶಕರು, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್
- ಶ್ರೀಮತಿ ಮಮತಾ, ವಿಶ್ವನಾಥ, ವರ್ತಕರು
- ಶ್ರೀಮತಿ ಗೀತಾ, ಮಲ್ಲಿಕಾರ್ಜುನಯ್ಯ ✦ ಶ್ರೀಮತಿ ನಂದಿನಿ, ರೇಣುಕಾ ಪ್ರಸಾದ್
- ಶ್ರೀಮತಿ ನಾಗಮ್ಮ, ಮಲ್ಲಯ್ಯಸ್ವಾಮಿ, ವರ್ತಕರು, ದೇವದುರ್ಗ.
- ಶ್ರೀಮತಿ ಬನ್ನಮ್ಮ, ಬಸಯ್ಯಸ್ವಾಮಿ, ದೇವದುರ್ಗ.
- ಶ್ರೀ ಎನ್.ಎ. ಮುರುಗೇಶ್, ಅಧ್ಯಕ್ಷರು, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್
- ಶ್ರೀ ಎಸ್.ಕೆ. ವೀರಣ್ಣ, ಉಪಾಧ್ಯಕ್ಷರು, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್
- ಶ್ರೀಮತಿ ಗೌರಮ್ಮ, ಆರ್.ಎಂ. ಶಿವಕುಮಾರ್, ವರ್ತಕರು, ಬೆಂಗಳೂರು.
- ಶ್ರೀಮತಿ ಭಾಗ್ಯ, ಬಸವರಾಜಯ್ಯ ✦ ಶ್ರೀಮತಿ ಸುಜಾತ, ಬಸವರಾಜಯ್ಯ, ಬೆಂಗಳೂರು.
- ಶ್ರೀಮತಿ ಶಾರದಮ್ಮ, ರವೀಂದ್ರಯ್ಯ, ಬೆಂಗಳೂರು. ✦ ಶ್ರೀಮತಿ ಮೀನಾ, ಮುರುಗೇಶ್
- ಶ್ರೀಮತಿ ಹೊನ್ನಮ್ಮ
- ಶ್ರೀಮತಿ ಬನಶಂಕರಿ, ರಾಜಶೇಖರ್, ವರ್ತಕರು, ಬೆಂಗಳೂರು.
- ಶ್ರೀ ಬೆಳ್ಳೂಡಿ ಮಲ್ಲಿಕಾರ್ಜುನ್ ✦ ಶ್ರೀ ಬೆಳ್ಳೂಡಿ ಪ್ರಕಾಶ್
- ಶ್ರೀ ಬಸವರಾಜಪ್ಪ ✦ ಶ್ರೀ ವೀರಭದ್ರಪ್ಪ ✦ ಶ್ರೀ ಗಣೇಶ
- ಶ್ರೀ ಹನುಮಂತನಾಯ್ಕ, ಮುಖ್ಯೋಪಾಧ್ಯಾಯರು ಮತ್ತು ಸಹ ಶಿಕ್ಷಕರು
- ಶ್ರೀ ವೇ॥ ಬಸವರಾಜಯ್ಯ, ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳು, ವೇದಾಗಮ ಸಂಸ್ಕೃತ ಪಾಠಶಾಲೆ
- ಶ್ರೀಮತಿ ನಾಗಮ್ಮ, ಎಸ್. ಮಲ್ಲಪ್ಪ, ಗುಂತಕಲ್ಲು.
- ಶ್ರೀ ಬಕ್ಕೇಶ್ ನಾಗನೂರು, ಹಿರಿಯ ಪತ್ರಕರ್ತರು ✦ ಶ್ರೀಮತಿ ಮಲ್ಲಮ್ಮ, ನಾಗರಾಜಸ್ವಾಮಿ, ಹರಿಹರ
- ಶ್ರೀಮತಿ ಪೂಜಾ, ಮಂಜುನಾಥಸ್ವಾಮಿ, ಮುಖ್ಯ ವ್ಯವಸ್ಥಾಪಕರು, ಎಸ್‌ಜೆಎಸ್‌ಎಸ್ ಟ್ರಸ್ಟ್, ಶ್ರೀಶೈಲಂ.
- ಶ್ರೀ ಶೈಲ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯವರು ✦ ಬಾಬುಸಾಬ್ ಆನೆ



ವಿ.ಸೂ. : ಆಹ್ವಾನ ಪತ್ರಿಕೆ ಎಲ್ಲರಿಗೂ ಕಳಿಸಲಾಗಿದ್ದು, ತಲುಪದೇ ಇದ್ದವರು ಇದನ್ನೇ ವೈಯಕ್ತಿಕ ಆಮಂತ್ರಣವೆಂದು ಭಾವಿಸಿ, ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte